Volume : 9 | Issue : 169 | September : 22 : 2026 : Tuesday
ಸಂಪುಟ : 9 | ಸಂಚಿಕೆ : 169 | ಸೆಪ್ಟೆಂಬರ್ : 22 : 2026 : ಮಂಗಳವಾರ

www.VIKRAMAVAHINI.com
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ವಿಕ್ರಮ ವಾಹಿನಿ

ಪುಟ 4 ₹2 ಕನ್ನಡ ದಿನಪತ್ರಿಕೆ

VIKRAMA VAHINI
PRGI NO: KARKAN/2018/78481



ನಟ ರಜನಿಕಾಂತ್ ಅಭಿನಯದ ಬಹುನಿರೀಕ್ಷಿತ 'ಜೈಲರ್ 2' ಚಿತ್ರತಂಡಕ್ಕೆ ಬಾಲಿವುಡ್ ನಟಿ ವಿದ್ಯಾ ಬಾಲನ್ ಸೇರ್ಪಡೆಯಾಗಿದ್ದು, 'ಕಾಂತಾ' ಪಾತ್ರದಲ್ಲಿ ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ನೆಲ್ಸನ್ ದಿಲೀಪ್‌ಕುಮಾರ್ ನಿರ್ದೇಶನದ ಈ ಚಿತ್ರ ಅಕ್ಟೋಬರ್ 15ರಂದು ವಿಶ್ವದಾದ್ಯಂತ ತೆರೆಕಾಣಲಿದೆ.

ಸೌಜನ್ಯ ಪ್ರಕರಣ ಮರು ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ಸಲ್ಲಿಸಿ: ಸುಪ್ರೀಂ ಕೋರ್ಟ್ | ಪುಟ 4

'ಎನ್‌ಜಿಟಿಯಿಂದ ಒಂದು ವರ್ಷ ಕಾಲಾವಕಾಶ ಪಡೆದು ಭೌತಿಕ ಸಮೀಕ್ಷೆ ನಡೆಸಿ' | ಪುಟ 2



## ■ ಸುದ್ದಿ ಚುಟುಕು

### ಪಶುವೈದ್ಯಾಧಿಕಾರಿ ನೇಮಕಾತಿ ಅಕ್ರಮ; ಎಸ್‌ಐಟಿ ರಚನೆ

● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಪಶುವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ತನಿಖೆಗೆ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಕರ್ನಾಟಕ ಹೈಕೋರ್ಟ್ ಆದೇಶಿಸಿದೆ. ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಸೋಮವಾರ ಈ ಆದೇಶ ನೀಡಿದ್ದು, ಎಸ್‌ಐಟಿಗೆ 100 ದಿನಗಳಲ್ಲಿ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಸೂಚಿಸಿದೆ.

ಅಲೋಕ್ ಕುಮಾರ್ ಅವರೊಂದಿಗೆ ದಿವ್ಯಾ ಗೋಪಿನಾಥ್, ಅನೂಪ್ ಶೆಟ್ಟಿ, ಕುಶಾಲ್ ಚೌಕ್ಸೆ ಮತ್ತು ಕ್ಷಮಾ ಮಿಶ್ರಾ ಅವರನ್ನು ಒಳಗೊಂಡ ಐವರು ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ತನಿಖೆಯ ಪ್ರಗತಿ ಕುರಿತು ಪ್ರತಿ 30 ದಿನಗಳಿಗೊಮ್ಮೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಈಗಾಗಲೇ ತನಿಖೆ ನಡೆಸುತ್ತಿರುವ ಸಿಐಡಿ ಹಾಗೂ ಸಂಬಂಧಪಟ್ಟ ಪೊಲೀಸರು ತಮ್ಮ ಬಳಿ ಇರುವ ಪ್ರಕರಣದ ಸಂಪೂರ್ಣ ದಾಖಲೆಗಳು, ದಾಖಲೆಪತ್ರಗಳು, ಎಲೆಕ್ಟ್ರಾನಿಕ್ ಮತ್ತು ಇತರ ಸಾಕ್ಷ್ಯಗಳನ್ನು ಎಸ್‌ಐಟಿಗೆ ಹಸ್ತಾಂತರಿಸಬೇಕು. ರಾಜ್ಯ ಸರ್ಕಾರ ಎಸ್‌ಐಟಿಗೆ ಪೊಲೀಸ್ ಠಾಣೆ ಸ್ಥಾನಮಾನ ನೀಡಿ ಈ ಕುರಿತು ಶೀಘ್ರ ಅಧಿಸೂಚನೆ ಹೊರಡಿಸಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ನಡೆಸುತ್ತಿರುವ ತನಿಖೆಗೆ ಎಸ್‌ಐಟಿ ಅಗತ್ಯ ಸಹಕಾರ ನೀಡಬೇಕು. ಇಡಿ ತನಿಖೆಯಲ್ಲಿ ಲಭ್ಯವಾಗುವ ಮಾಹಿತಿಯನ್ನೂ ಎಸ್‌ಐಟಿ ಪಡೆದು ತನಿಖೆಗೆ ಬಳಸಿಕೊಳ್ಳಬಹುದು ಎಂದು ನ್ಯಾಯಾಲಯ ಸೂಚಿಸಿದೆ. ಎಸ್‌ಐಟಿ ತನಿಖೆ ಈಗಾಗಲೇ ಹೆಸರಾಗಿರುವ ವ್ಯಕ್ತಿಗಳು ಅಥವಾ ಆರೋಪಗಳಿಗೆ ಮಾತ್ರ ಸೀಮಿತವಾಗಬಾರದು. ತನಿಖೆ ವೇಳೆ ಇತರ ವ್ಯಕ್ತಿಗಳು, ವಹಿವಾಟುಗಳು ಅಥವಾ ಅಪರಾಧಗಳ ನಂಟು ಪತ್ತೆಯಾದರೆ, ಸಾಕ್ಷ್ಯಾಧಾರಗಳ ಆಧಾರದಲ್ಲಿ ಮುಂದುವರಿಯಬೇಕು ಎಂದು ನ್ಯಾಯಪೀಠ ತಿಳಿಸಿದೆ.

### ತಿದ್ದುಪಡಿ ಕಾಯ್ದೆ ನಿವೃತ್ತ ಅಧಿಕಾರಿಗಳಿಗೆ ಪೂರ್ವಾನ್ವಯವಲ್ಲ: ಹೈಕೋರ್ಟ್

● ವಿಕ್ರಮ ವಾಹಿನಿ । ಬೆಂಗಳೂರು

ವಿಚಾರಣಾ ನ್ಯಾಯಾಲಯವು ಕಾಗ್ನಿಜೆನ್ಸ್ ಪಡೆದ ಬಳಿಕ ಜಾರಿಗೆ ಬಂದ ಭ್ರಷ್ಟಾಚಾರ ತಡೆ ಕಾಯ್ದೆಯ ತಿದ್ದುಪಡಿ ನಿವೃತ್ತ ಅಧಿಕಾರಿಗಳಿಗೆ ಪೂರ್ವಾನ್ವಯವಾಗುವುದಿಲ್ಲ. ಅಲ್ಲದೆ, ಅಂತಹ ಪ್ರಕರಣಗಳಲ್ಲಿ ನಿವೃತ್ತ ಅಧಿಕಾರಿಯ ವಿರುದ್ಧ ವಿಚಾರಣೆ ಮುಂದುವರಿಸಲು ಸರ್ಕಾರದಿಂದ ಹೊಸದಾಗಿ ಪ್ರಾಸಿಕ್ಯೂಷನ್ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ.

ಬಿಬಿಎಂಪಿ ಮಲ್ಲೇಶ್ವರಂ ವಿಭಾಗದ ನಿವೃತ್ತ ಕಾರ್ಯನಿರ್ವಾಹಕ ಎಂಜಿನಿಯರ್ ಬಿ.ಜಿ. ಪ್ರಕಾಶ್ ಕುಮಾರ್ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದ್ದು, ಅರ್ಜಿಗಳನ್ನು ವಜಾಗೊಳಿಸಿದೆ.

2018ರ ಜುಲೈ 26ರಂದು ಭ್ರಷ್ಟಾಚಾರ ತಡೆ ಕಾಯ್ದೆಗೆ ಮಾಡಲಾದ ತಿದ್ದುಪಡಿ ಭವಿಷ್ಯದಲ್ಲಿ ದಾಖಲಾದ ಪ್ರಕರಣಗಳಿಗೆ ಅನ್ವಯಿಸುತ್ತದೆ. ತಿದ್ದುಪಡಿ ಜಾರಿಗೆ ಬರುವುದಕ್ಕೂ ಮುನ್ನವೇ ನ್ಯಾಯಾಲಯ ಕಾಗ್ನಿಜೆನ್ಸ್ ಪಡೆದಿರುವ ಪ್ರಕರಣಗಳಿಗೆ ಅದನ್ನು ಪೂರ್ವಾನ್ವಯವಾಗಿ ಅನ್ವಯಿಸಲು ಸಾಧ್ಯವಿಲ್ಲ ಎಂದು ಪೀಠ ಹೇಳಿದೆ. ಪ್ರಸ್ತುತ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡು 2018ರ ಮೇ ತಿಂಗಳಲ್ಲೇ ವಿಚಾರಣಾ ನ್ಯಾಯಾಲಯ ಕಾಗ್ನಿಜೆನ್ಸ್ ಪಡೆದಿತ್ತು. ಹೀಗಾಗಿ ಪ್ರಕಾಶ್ ಕುಮಾರ್ ನಿವೃತ್ತರಾಗಿದ್ದಾರೆ ಎಂಬ ಕಾರಣಕ್ಕೆ ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ವಿಚಾರಣೆ ಮುಂದುವರಿಸಲು ಸರ್ಕಾರದಿಂದ ಪ್ರತ್ಯೇಕ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ವಿಶೇಷ ನ್ಯಾಯಾಲಯದ ಆದೇಶದಲ್ಲಿ ಯಾವುದೇ ಕಾನೂನುಬಾಹಿರತೆ ಇಲ್ಲ ಎಂದು ಹೇಳಿದ ಪೀಠ, ಅವರ ವಿರುದ್ಧದ ವಿಚಾರಣೆಗೆ ಹಸಿರು ನಿಶಾನೆ ತೋರಿಸಿದೆ.


ವಿಚಾರಣೆ ವೇಳೆ, 2018ರ ತಿದ್ದುಪಡಿಯ ಬಳಿಕ ನಿವೃತ್ತ ಸರ್ಕಾರಿ ನೌಕರರ ವಿರುದ್ಧವೂ ವಿಚಾರಣೆ ನಡೆಸಲು ಸರ್ಕಾರದ ಪೂರ್ವಾನುಮತಿ ಅಗತ್ಯವಾಗಿದ್ದು, ತಮ್ಮ ಪ್ರಕರಣದಲ್ಲಿ ಅಂತಹ ಅನುಮತಿ ಪಡೆಯಲಾಗಿಲ್ಲ. ಹೀಗಾಗಿ ಪ್ರಕರಣ ರದ್ದುಗೊಳಿಸಬೇಕು ಎಂದು ಅರ್ಜಿದಾರರ ಪರ ವಕೀಲರು ವಾದಿಸಿದ್ದರು. ಸರ್ಕಾರದ ಪರ ವಕೀಲರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು.

# ದೇಣಿಗೆ ಕಳವು; 105 ಪ್ರಕರಣ ಸಿಸಿಟಿವಿಯಲ್ಲಿ ಸೆರೆ

● ವಿಕ್ರಮ ವಾಹಿನಿ । ನವದೆಹಲಿ

ಅಯೋಧ್ಯೆಯ ರಾಮಮಂದಿರದಲ್ಲಿ ದೇಣಿಗೆ ಕಳವು ನಡೆದಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ 105 ಘಟನೆಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾಗಿರುವುದಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿರುವ ವರದಿಯಲ್ಲಿ ತಿಳಿಸಲಾಗಿದೆ. ಸೋಮವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ಗೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಎಸ್‌ಐಟಿ ವರದಿಯ ವಿವರಗಳನ್ನು ತಿಳಿಸಿದ್ದಾರೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿ.ಮೋಹನ ಅವರನ್ನೊಳಗೊಂಡ ಪೀಠವು ಎಸ್‌ಐಟಿ ಸಲ್ಲಿಸಿದ್ದ ಮುಚ್ಚಿದ ಲಕೋಟೆಯಲ್ಲಿನ ಸ್ಥಿತಿಗತಿ ವರದಿಯನ್ನು ಪರಿಶೀಲಿಸಿತು. ಸಿಸಿಟಿವಿ ದೃಶ್ಯಾವಳಿ, ಸಾಕ್ಷಿಗಳ ಹೇಳಿಕೆಗಳು, ದೇಣಿಗೆ ದಾಖಲೆಗಳು ಹಾಗೂ ಇತರ ಸಾಕ್ಷ್ಯಗಳನ್ನು ವಿಶ್ಲೇಷಿಸಿ ಆರೋಪಿಗಳನ್ನು ಗುರುತಿಸುವ ಪ್ರಯತ್ನ ನಡೆಸಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ತನಿಖೆ ಅಂತಿಮ ಹಂತದಲ್ಲಿದ್ದು, ಮೊದಲ ಬಂಧನವಾಗಿ 90 ದಿನಗಳು ಸೆ.25ರಂದು ಪೂರ್ಣಗೊಳ್ಳಲಿವೆ. ಆ ಅವಧಿಯೊಳಗೆ ಆರೋಪಪಟ್ಟಿ ಸಲ್ಲಿಸದಿದ್ದರೆ ಆರೋಪಿಗಳಿಗೆ ಡೀಫಾಲ್ಟ್ ಜಾಮೀನು ಸಿಗುವ ಸಾಧ್ಯತೆ ಇರುವುದರಿಂದ ಸೆ.25ರೊಳಗೆ ಮೊದಲ ಆರೋಪಪಟ್ಟಿ ಸಲ್ಲಿಸಲಾಗುವುದು ಎಂದು ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು. ಆರೋಪಪಟ್ಟಿ ಸಲ್ಲಿಕೆಯ ಬಳಿಕ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಮ್ಯಾಜಿಸ್ಟ್ರೇಟ್‌ಗೆ ಪೀಠ ನಿರ್ದೇಶನ ನೀಡಿದೆ.



ದೇಣಿಗೆಯಾಗಿ ಸ್ವೀಕರಿಸಲಾದ ಬೆಲೆಬಾಳುವ ವಸ್ತುಗಳ ನಿರ್ವಹಣೆ, ಅವುಗಳಿಗೆ ನೀಡಲಾಗುವ ರಸೀದಿ, ಬ್ಯಾಂಕ್‌ನಲ್ಲಿ ಇರಿಸುವ ಪ್ರಕ್ರಿಯೆ ಸೇರಿದಂತೆ ಹಲವು ಅಂಶಗಳನ್ನೂ ಎಸ್‌ಐಟಿ ಪರಿಶೀಲಿಸಿದೆ. ಸಾಕ್ಷ್ಯಗಳ ಆಧಾರದ ಮೇಲೆ ಪ್ರಕರಣದ ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಂತೆ ಸುಪ್ರೀಂ ಕೋರ್ಟ್ ಈ ಹಿಂದೆ ಸೂಚಿಸಿತ್ತು.

ರಾಮಮಂದಿರ ದೇಣಿಗೆ ನಿರ್ವಹಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳ ಕುರಿತು ಸ್ವತಂತ್ರ ತನಿಖೆ ಹಾಗೂ ಸಮಗ್ರ ಪರಿಶೀಲನೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಪ್ರಕರಣದ ತನಿಖೆಯ ಪ್ರಗತಿ ಕುರಿತು ಎಸ್‌ಐಟಿ ಸಲ್ಲಿಸಿರುವ ವರದಿಯನ್ನು ನ್ಯಾಯಾಲಯ ದಾಖಲಿಸಿಕೊಂಡಿದೆ.

# ಕಸ್ತೂರಿರಂಗನ್ ವರದಿ ತಿರಸ್ಕರಿಸಲು ಸದನದಲ್ಲಿ ಒಮ್ಮತದ ಧ್ವನಿ

● ವಿಕ್ರಮ ವಾಹಿನಿ । ಬೆಂಗಳೂರು

**ಪಶ್ಚಿಮ ಘಟ್ಟದ 20,668 ಚದರ ಕಿ.ಮೀ. ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದ ಕಸ್ತೂರಿರಂಗನ್ ವರದಿಯಿಂದ 10 ಜಿಲ್ಲೆಗಳ 39 ತಾಲೂಕುಗಳ 1,449 ಹಳ್ಳಿಗಳ ಜನಜೀವನದ ಮೇಲೆ ಪರಿಣಾಮ ಬೀರುವ ಆತಂಕ ವ್ಯಕ್ತಪಡಿಸಿದ ಆಡಳಿತಾರೂಢ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ ಶಾಸಕರು ಮತ್ತು ಸಚಿವರು, ವರದಿಯನ್ನು ಮತ್ತೊಮ್ಮೆ ಪರಿಷ್ಕರಿಸುವ ಅಗತ್ಯವನ್ನು ಸದನದಲ್ಲಿ ಒತ್ತಿ ಹೇಳಿದರು. ಪರಿಸರ ಸಂರಕ್ಷಣೆಯ ಜತೆಗೆ ಮಲೆನಾಡು ಮತ್ತು ಪಶ್ಚಿಮ ಘಟ್ಟದ ಜನರ ಬದುಕು, ಕೃಷಿ, ಕುಡಿಯುವ ನೀರು ಹಾಗೂ ಅಭಿವೃದ್ಧಿಗೂ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದ ಸದಸ್ಯರು, ಸ್ಥಳೀಯರೊಂದಿಗೆ ಸಮಾಲೋಚನೆ ನಡೆಸಿ ವೈಜ್ಞಾನಿಕವಾಗಿ ವರದಿಯನ್ನು ಪರಿಷ್ಕರಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಗಮನ ಸೆಳೆಯಲು ಒತ್ತಾಯಿಸಿದರು. ಮೂರು ದಿನಗಳ ವಿಶೇಷ ಕಲಾಪದ ಮೊದಲ ದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಷಯ ಪ್ರಸ್ತಾಪಿಸಿದ ಬಳಿಕ ಪ್ರತಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ವಿವಿಧ ಪಕ್ಷಗಳ ಶಾಸಕರು ವರದಿಯ ಸಾಧಕ–ಬಾಧಕಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು.**

ರಾಜ್ಯದ 20668 ಚದುರ ಮೀಟರ್ ಅರಣ್ಯಕ್ಕೆ ಕುತ್ತು ಬಂದಿದ್ದು ಇದರಿಂದ 10 ಜಿಲ್ಲೆಗಳ, 39 ತಾಲೂಕುಗಳ 1449 ಹಳ್ಳಿಗಳ ಜನಜೀವನದ ಮೇಲೆ ಅಗಾಧವಾದ ಪರಿಣಾಮ ಬೀರಲಿದೆ ಎನ್ನುವ ಆತಂಕವನ್ನು ಎಲ್ಲ ಪಕ್ಷದ ಶಾಸಕರು ತಮ್ಮ ಆತಂಕವನ್ನು ಸದನದಲ್ಲಿ ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಡಾ.ಕೆ. ಕಸ್ತೂರಿ ರಂಗನ್ ಅವರ ವರದಿಯನ್ನು ಪರಿಷ್ಕರಿಸುವ ಅಗತ್ಯತೆ ಇದೆ ಎಂದು ಆಡಳಿತಾರೂಢ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನ ಶಾಸಕರು ಮತ್ತು ಸಚಿವರು ಸದನದ ಗಮನ ಸೆಳೆದರು.

3 ದಿನಗಳ ಕಾಲ ನಡೆಯಲಿರುವ ಸದನ ಕಲಾಪದ ಮೊದಲ ದಿನ ಸೋಮವಾರದಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಡಾ.ಕೆ.ಕಸ್ತೂರಿ ರಂಗನ್ ವರದಿ ಕುರಿತು ಪ್ರಸ್ತಾಪಿಸಿದರು. ಇದರ ಸಾಧಕ, ಬಾಧಕಗಳ ಕುರಿತು ವಿಪಕ್ಷಗಳ ನಾಯಕರಾದ ಆರ್. ಅಶೋಕ್, ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವು ಶಾಸಕರು ಮತ್ತು ಆಡಳಿತಾರೂಢ ಪಕ್ಷದ ಶಾಸಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಮಧ್ಯಾಹ್ನದ ವಿರಾಮದ ನಂತರ ಮತ್ತೆ 3 ಗಂಟೆಯಿಂದ ಸದನದಲ್ಲಿ ಕರ್ನಾಟಕದ ಪಶ್ಚಿಮ ಘಟ್ಟಗಳಿಗೆ ಡಾ.ಕೆ.ಕಸ್ತೂರಿ ರಂಗನ್ ವರದಿ ಹೇಗೆ ಮಾರಕವಾಗಲಿದೆ? ಎನ್ನುವುದನ್ನು ಪ್ರತಿಯೊಬ್ಬ ಶಾಸಕರು ತಮ್ಮ ದುಗುಡಗಳನ್ನು ವ್ಯಕ್ತಪಡಿಸಿದರು.

ಮಧ್ಯಾಹ್ನದ ಕಲಾಪದ ವೇಳೆ ಮೊದಲಿಗೆ ಮಾತನಾಡಿದ ಹಳಿಯಾಳ ಕ್ಷೇತ್ರದ ಶಾಸಕ ಆರ್.ವಿ.ದೇಶಪಾಂಡೆ ಅವರು, ಈ ವರದಿ ಸ್ಯಾಟಲೈಟ್ ಮೂಲಕ ನೋಡಿ ಸಿದ್ಧಪಡಿಸಲಾಗಿದೆ. ಇದೊಂದು ಅವೈಜ್ಞಾನಿಕ ಮತ್ತು ಪಶ್ಚಿಮ ಘಟ್ಟಗಳಲ್ಲಿ ವಾಸ ಮಾಡುವ ಜನ–ಜಾನುವಾರುಗಳಿಗೆ ಮಾರಕವಾಗಲಿದೆ. ಅನೇಕ ಕಂದಾಯ ಗ್ರಾಮಗಳು, ಗುಡ್ಡ ಪ್ರದೇಶ, ಕೃಷಿ ಆಧಾರಿತ ಜಮೀನುಗಳು, ಕುಡಿಯುವ ನೀರಿನ ಯೋಜನೆಗಳು ನೆನೆಗುದಿಗೆ ಬೀಳಲಿವೆ. ಅಧಿಸೂಚನೆಯಿಂದ ಜನರ ಜೀವನದ ಮೇಲೆ ಕಳಂಕ ಬೀರಲಿದೆ. ಎಲ್ಲ ಶಾಸಕರು ಒಕ್ಕೊರಲಿನಿಂದ ತಿರಸ್ಕರಿಸಬೇಕು. ಪಶ್ಚಿಮ ಘಟ್ಟದ ಜನರು ನೆಮ್ಮದಿ ಹಾಗೂ ಶಾಂತಿಯಿಂದ ಜೀವಿಸುವಂತಹ ವಾತಾವರಣ ನಿರ್ಮಿಸಬೇಕು. ಈ ಕುರಿತು ಕೇಂದ್ರ ಸರ್ಕಾರದ ಗಮನ ಸೆಳೆದು, ಸಾಧ್ಯವಾದರೆ ಪ್ರಧಾನಮಂತ್ರಿಗಳಿಗೂ ಇದರ ಬಾಧಕಗಳ ಕುರಿತು ತಿಳಿಸಿ ರಾಜ್ಯದ ಹಿತ ಕಾಪಾಡುವಂತೆ ಮನವಿ ಮಾಡಬೇಕೆಂದರು.

ಶಿವಮೊಗ್ಗ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕಿ ಶಾರದಾ ಪೂರ್ಯ ನಾಯಕ ಅವರು ಮಾತನಾಡಿ, ಡಾ.ಕೆ. ಕಸ್ತೂರಿ ರಂಗನ್ ವರದಿಯನ್ನು ಕಳೆದ 2013ರಿಂದಲೇ ತಿರಸ್ಕರಿಸುತ್ತಲೇ ಬರಲಾಗಿದೆ. ಇದೀಗ 7ನೇ ಬಾರಿಗೆ ಮತ್ತೆ ಮುನ್ನೆಲೆ ಚರ್ಚೆಗೆ ಬಂದಿದೆ. ಅರಣ್ಯ ಸಚಿವರು ಇದನ್ನು ಗಮನಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಸ್ಯಾಟಲೈಟ್ ಮೂಲಕ ಸಿದ್ಧಪಡಿಸಿರುವ ವರದಿಯನ್ನು ಮತ್ತೊಮ್ಮೆ ಆಧುನೀಕರಣಗೊಳಿಸುವ ಅಗತ್ಯವಿದೆ. ನಮ್ಮ ಕ್ಷೇತ್ರದ 65 ಗ್ರಾಮಗಳು, ನಯನ ಮೋಟಮ್ಮ ಅವರ ಕ್ಷೇತ್ರದ 30 ಗ್ರಾಮಗಳು ಸೇರಿದಂತೆ ಶರಾವತಿ ಮುಳುಗಡೆ ಜನರು ತೂಗುಗತ್ತಿಯಲ್ಲಿ ಜೀವಿಸುತ್ತಿದ್ದಾರೆ. 'ಪರಿಸರ ಸೂಕ್ಷ್ಮ ವಲಯ' ಕ್ಕೆ ಧಕ್ಕೆ ತರುವ ಕೆಲಸ ಈ ವರದಿಯಿಂದ ಆಗಬಾರದು. ಈ ಕುರಿತು ಸ್ಥಳೀಯರೊಂದಿಗೆ ಚರ್ಚಿಸಬೇಕು. ಶರಾವತಿಯ ಮುಳುಗಡೆ ಪ್ರದೇಶದ ಜನರಿಗೆ ನೆಮ್ಮದಿಯ ಬದುಕು ಕಲ್ಪಿಸಬೇಕು ಎಂದರು.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಅರಗ ಜ್ಞಾನೇಂದ್ರ ಅವರು ಮಾತನಾಡಿ, ಪರಿಸರ ಉಳಿಯಬೇಕು ಎನ್ನುವುದು ನಮ್ಮ ಅಪೇಕ್ಷೆ. ಪರಿಸರ, ಅರಣ್ಯದ ಜೊತೆಗೆ ನಾಗರಿಕತೆಗೆ ಅನುಗುಣವಾಗಿ ಅಭಿವೃದ್ಧಿಯೂ ಕೈಗೊಳ್ಳಬೇಕು. ಕಸ್ತೂರಿ ರಂಗನ್ ವರದಿ ಜನರ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿದೆ. ಜಯರಾಮ ರಮೇಶ್ ಅವರೇ ಕಸ್ತೂರಿ ರಂಗನ್ ವರದಿಗೆ ಈಲ್ಡ್ ಆಗಿದ್ದಾರೆ. ಪಾರಂಪರಿಕ ಅರಣ್ಯ, ಸಾಮಾಜಿಕ ಅರಣ್ಯ, ಯುನೆಸ್ಕೋ ಘೋಷಿತ ಅರಣ್ಯ ಮತ್ತು ಪ್ರಾಕೃತಿಕ ಭೌಗೋಳಿಕ ಸಂಪತ್ತನ್ನು ಸ್ಯಾಟ್‌ಲೈಟ್ ಮೂಲಕ ಸರ್ವೇ ಮಾಡಿ ಸಿದ್ಧಪಡಿಸಲಾಗಿದೆ. ಇದು ಕಾಡು ವಾಡಿಗಳಿಗೆ ಭಾರೀ ಪ್ರಮಾಣದಲ್ಲಿ ಅನಾಹುತ ಸೃಷ್ಟಿಸಲಿದೆ. ಆಗುಂಬೆಗಿಂತ ಹುಲಿಕಲ್ ಭಾಗದಲ್ಲಿ ಹೆಚ್ಚಿನ ಮಳೆ ಸುರಿಯುತ್ತದೆ.

ನಿತ್ಯ ಹರಿದ್ವರ್ಣದ ಕಾಡುಗಳಿಗೆ ಇದರಿಂದ ತೊಂದರೆ ಆಗಬಾರದು. ಅರಣ್ಯ ಇಲಾಖೆ ಅಧಿಕಾರಿಗಳು ತೆಗೆದುಕೊಳ್ಳುವ ಕೆಲವೊಂದು ನಿರ್ಧಾರಗಳಿಂದ ಅಭಿವೃದ್ಧಿಗೆ ದೊಡ್ಡ ಮಾರಕವಾಗಿದೆ. ಒಟ್ಟಿನಲ್ಲಿ ಈ ವರದಿ ಆಧರಿಸಿ ಮಲೆನಾಡಿನ ಭಾಗದ ಜನರ ಬದುಕಿನ ಜೊತೆಗೆ ಚೆಲ್ಲಾಟವಾಡುವುದನ್ನು ಕೈ ಬಿಡಬೇಕೆಂದು ತಾಕೀತು ಮಾಡಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಪೊನ್ನಣ್ಣ, ಮೂಡಿಗೆರೆ ಕ್ಷೇತ್ರದ ನಯನ ಮೋಟಮ್ಮ, ಭಾಲ್ಕಿ ಕ್ಷೇತ್ರದ ಶಾಸಕರು ಹಾಗೂ ಸಚಿವರಾದ ಈಶ್ವರ್ ಖಂಡ್ರೆ, ಹುಬ್ಬಳ್ಳಿ ಶಾಸಕ ಬೆಲ್ಲದ್ ಸೇರಿದಂತೆ ಹಲವು ಶಾಸಕರು ಸಂಜೆಯವರೆಗೂ ಕಸ್ತೂರಿ ರಂಗನ್ ವರದಿ ವಿರೋಧಿಸುವ ಕುರಿತು ತಮ್ಮದೇ ಧ್ವನಿಯನ್ನು ಮೊಳಗಿಸಿದರು.

# ಹಣ ಬಿಡುಗಡೆಗೆ ಲಂಚ; ಇನ್‌ಸ್ಪೆಕ್ಟರ್ ಲೋಕಾಯುಕ್ತ ಬಲೆಗೆ



● ವಿಕ್ರಮ ವಾಹಿನಿ । ಮಂಗಳೂರು

ವಂಚನೆ ಪ್ರಕರಣವೊಂದರಲ್ಲಿ ವಶಪಡಿಸಿಕೊಂಡಿದ್ದ ಹಣವನ್ನು ಬಿಡುಗಡೆ ಮಾಡಲು ದೂರುದಾರರಿಂದ ಲಂಚಕ್ಕೆ ಬೇಡಿಕೆ ಇಟ್ಟು, ಹಣ ಸ್ವೀಕರಿಸುತ್ತಿದ್ದ ಬಜ್ಪೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಬಾಲಕೃಷ್ಣ ಅವರನ್ನು ಮಂಗಳೂರು ಲೋಕಾಯುಕ್ತ ಪೊಲೀಸರು ಸೋಮವಾರ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.

ಬಜ್ಪೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣದ ತನಿಖೆ ವೇಳೆ ಆರೋಪಿಗಳಿಂದ ಹಣವನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಹಣವನ್ನು ಬಿಡುಗಡೆ ಮಾಡಲು ಇನ್‌ಸ್ಪೆಕ್ಟರ್ ಬಾಲಕೃಷ್ಣ ಅವರು ದೂರುದಾರರಿಂದ ಒಟ್ಟು ರೂ 25,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಈ ಪೈಕಿ ರೂ 15,000 ಹಣವನ್ನು ಈಗಾಗಲೇ ಮುಂಗಡವಾಗಿ ಪಡೆದಿದ್ದರು.

ಬಳಿಕ ಉಳಿದ ರೂ 10,000 ಪೈಕಿ ರೂ 5,000 ಹಣವನ್ನು ನೀಡುವಂತೆ ದೂರುದಾರರಿಗೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ದೂರುದಾರರು ಮಂಗಳೂರು ವಿಭಾಗದ ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು ಸೋಮವಾರ ಬಜ್ಪೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದರು. ದೂರುದಾರರಿಂದ ನಿಗದಿಪಡಿಸಿದ್ದ ರೂ 5,000 ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಇನ್‌ಸ್ಪೆಕ್ಟರ್ ಬಾಲಕೃಷ್ಣ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಸ್ಥಳದಲ್ಲೇ ವಶಕ್ಕೆ ಪಡೆದಿದ್ದಾರೆ.

ಆರೋಪಿತ ಅಧಿಕಾರಿಯನ್ನು ವಶಕ್ಕೆ ಪಡೆದು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರಿದಿದೆ ಎಂದು ಮಂಗಳೂರು ಲೋಕಾಯುಕ್ತ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಡಿಲು ಬಡಿದು ಮೂವರು ರೈತರ ಸಾವು

● ವಿಕ್ರಮ ವಾಹಿನಿ । ಬೆಳಗಾವಿ

ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪರಿಣಾಮ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಕಲಬುರಗಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಸಿಡಿಲು ಬಡಿದು ಇಬ್ಬರು ಮಹಿಳೆಯರು ಸೇರಿದಂತೆ ಮೂವರು ರೈತರು ಮೃತಪಟ್ಟಿದ್ದಾರೆ.

ಕಲಬುರಗಿ ಜಿಲ್ಲೆಯ ಕಮಲಾಪುರ ತಾಲೂಕಿನ ನಾಗೂರು ಗ್ರಾಮದಲ್ಲಿ ಭಾನುವಾರ ತೊಗರಿ ಹೊಲದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲು ಬಡಿದು ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಮೃತರನ್ನು ನಾಗೂರು ಗ್ರಾಮದ ಲಕ್ಷ್ಮಿ ಬಸಯ್ಯ ಗುತ್ತೇದಾರ (45) ಹಾಗೂ ಸೈಜಾದುಬೀ ಫತ್ರು ಸಾಬ್ (60) ಎಂದು ಗುರುತಿಸಲಾಗಿದೆ.

ತೊಗರಿ ಬೆಳೆಯಲ್ಲಿ ಮಹಿಳೆಯರು ಕಳೆ ಕೀಳುತ್ತಿದ್ದ ವೇಳೆ ಏಕಾಏಕಿ ಮಳೆ ಸುರಿದಿದೆ. ಮಳೆಯಿಂದ ತಪ್ಪಿಸಿಕೊಳ್ಳಲು ಕೆಲವರು ಗಿಡದ ಕೆಳಗೆ ನಿಂತಿದ್ದಾಗ ಸಿಡಿಲು ಬಡಿದಿದೆ ಎನ್ನಲಾಗಿದೆ. ಘಟನೆಯಲ್ಲಿ ಇಬ್ಬರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದು, ಉಳಿದವರು ಅಪಾಯದಿಂದ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಇದೇ ವೇಳೆ ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕಿನ ಶ್ರೀರಂಗಪುರ ಗ್ರಾಮದಲ್ಲೂ ಸಿಡಿಲು ಬಡಿದು ರೈತರೊಬ್ಬರು ಮೃತಪಟ್ಟಿದ್ದಾರೆ. ಭಾನುವಾರ ತಡರಾತ್ರಿ ಸಂಭವಿಸಿದ ಘಟನೆಯಲ್ಲಿ ಮದ್ಲೂರು ಗ್ರಾಮದ ರೈತ ಕೇದಾರಪ್ಪ ಮಲ್ಲಪ್ಪ ಗುರ್ಲಹೊಸೂರ (ಹೆಸರು ಮೂಲ ವರದಿಯಂತೆ) ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮಳೆ ಮುಂದುವರಿದಿರುವ ಹಿನ್ನೆಲೆಯಲ್ಲಿ ರೈತರು ಹಾಗೂ ಸಾರ್ವಜನಿಕರು ಸಿಡಿಲು–ಮಳೆಯ ಸಂದರ್ಭದಲ್ಲಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

# 'ವಂದೇ ಮಾತರಂ'ಗೆ ಕತ್ತರಿ; ಸಂಸತ್ತಿನಲ್ಲಿ ಕಾಂಗ್ರೆಸ್ ವಿರುದ್ಧ ಧ್ವನಿ ಎತ್ತುತ್ತೇವೆ'

## ■ ದೇಶದ ಹೆಮ್ಮೆಯನ್ನೇ ಬಲಿ ಕೊಡಲು ಕಾಂಗ್ರೆಸ್ ಹೊರಟಿದೆ ಎಂದು ಕೇಂದ್ರ ಸಚಿವರ ಆರೋಪ ■

● ವಿಕ್ರಮ ವಾಹಿನಿ । ನವದೆಹಲಿ

ವಿಧಾನಸೌಧದಲ್ಲಿ 'ವಂದೇ ಮಾತರಂ' ಗೀತೆಯನ್ನು ಎರಡು ಚರಣಗಳಿಗೆ ಸೀಮಿತಗೊಳಿಸಿರುವ ರಾಜ್ಯ ಸರ್ಕಾರದ ಕ್ರಮದ ವಿರುದ್ಧ ಸಂಸತ್ತಿನಲ್ಲಿ ಧ್ವನಿ ಎತ್ತುವುದಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ 'ವಂದೇ ಮಾತರಂ' ಗೀತೆಯನ್ನು ಕಾನೂನುಬಾಹಿರವಾಗಿ ಕತ್ತರಿಸಿ ಕೇವಲ ಎರಡು ಚರಣಗಳನ್ನು ಹಾಡಿಸಿದೆ ಎಂದು ಆರೋಪಿಸಿರುವ ಜೋಶಿ, ಕರ್ನಾಟಕದಲ್ಲಿ ಸರ್ಕಾರ ಮನಸೋಇಚ್ಛೆ ಆದೇಶಗಳನ್ನು ಹೊರಡಿಸುತ್ತಿದೆ ಎಂದು ಟೀಕಿಸಿದ್ದಾರೆ.

'ವಂದೇ ಮಾತರಂ' ಅನ್ನು ಎರಡು ಚರಣಗಳಿಗೆ ಸೀಮಿತಗೊಳಿಸಿರುವುದು ಖಂಡನೀಯ. ಈ ಮೂಲಕ ಕಾಂಗ್ರೆಸ್ ತನ್ನ ದೇಶಭಕ್ತಿಯ ಮುಖವಾಡವನ್ನು ಕಳಚಿಕೊಂಡಿದೆ ಎಂದು ಜೋಶಿ ವಾಗ್ದಾಳಿ ನಡೆಸಿದ್ದಾರೆ.

**ರಾಷ್ಟ್ರಗೀತೆಗೆ ಅಪಮಾನ: ಜೋಶಿ:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ರಾಷ್ಟ್ರದ ಹೆಮ್ಮೆಯ ಗೀತೆಗೆ ಇಂತಹ ರೀತಿಯಲ್ಲಿ ಅಪಮಾನವಾಗುತ್ತಿರುವುದು ನಿರೀಕ್ಷಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ. ದೆಹಲಿಯ ಕಾಂಗ್ರೆಸ್ ನಾಯಕರನ್ನು ಓಲೈಸಲು ರಾಜ್ಯ ಕಾಂಗ್ರೆಸ್ ಇಂತಹ ನಿರ್ಧಾರ ಕೈಗೊಂಡಿದೆ ಎಂದು ಜೋಶಿ ಆರೋಪಿಸಿದ್ದಾರೆ.

ಕಾಂಗ್ರೆಸ್‌ಗೆ 'ವಂದೇ ಮಾತರಂ' ಬಗ್ಗೆ ಏಕೆ ಇಷ್ಟೊಂದು ವಿರೋಧ ಎಂಬುದನ್ನು ಪ್ರಶ್ನಿಸಿರುವ ಅವರು, ರಾಷ್ಟ್ರೀಯ ಗೌರವ ರಕ್ಷಣೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಸಂಸತ್ತಿನಲ್ಲಿ ಕೈಗೊಂಡ ಕ್ರಮಕ್ಕೂ ರಾಜ್ಯ ಸರ್ಕಾರದ ಈ ನಿರ್ಧಾರ ವಿರುದ್ಧವಾಗಿದೆ ಎಂದು ಟೀಕಿಸಿದ್ದಾರೆ.

ರಾಜ್ಯ ಸರ್ಕಾರದ ಇಂತಹ ಆದೇಶಗಳಿಂದ ದೇಶದ ರಾಷ್ಟ್ರೀಯ ಅಸ್ಮಿತೆಯನ್ನು ಅಳಿಸಲು ಸಾಧ್ಯವಿಲ್ಲ. ಈ ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿ ಸರ್ಕಾರದ ಕ್ರಮದ ವಿರುದ್ಧ ಧ್ವನಿ ಎತ್ತುವುದಾಗಿ ಪ್ರಲ್ಹಾದ ಜೋಶಿ ಹೇಳಿದ್ದಾರೆ.



**'ವಂದೇ ಮಾತರಂ' ಗೀತೆಯನ್ನು ಎರಡು ಚರಣಗಳಿಗೆ ಸೀಮಿತಗೊಳಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಖಂಡಿಸಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಈ ವಿಚಾರವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿ ಧ್ವನಿ ಎತ್ತುವುದಾಗಿ ಹೇಳಿದ್ದಾರೆ. ವಿಧಾನಸೌಧದಲ್ಲಿ ರಾಷ್ಟ್ರಗೀತೆಗೆ ಅಪಮಾನ ಮಾಡಲಾಗಿದೆ ಎಂದು ಆರೋಪಿಸಿರುವ ಅವರು, ಕಾಂಗ್ರೆಸ್ ಸರ್ಕಾರದ ಕ್ರಮ ದೇಶದ ಗೌರವ ಮತ್ತು ರಾಷ್ಟ್ರೀಯ ಅಸ್ಮಿತೆಗೆ ಧಕ್ಕೆ ತರುವಂತದ್ದು ಎಂದು ಟೀಕಿಸಿದ್ದಾರೆ.**

ಕರ್ನಾಟಕ ಸರ್ಕಾರ ಸೆ.8ರಂದು ಹೊರಡಿಸಿದ ಆದೇಶದಂತೆ, ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಅಥವಾ ರಾಜ್ಯಪಾಲರು ಭಾಗವಹಿಸುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ರಾಜ್ಯ ಸರ್ಕಾರಿ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ'ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲು ಸೂಚಿಸಲಾಗಿದೆ.

ಇದೇ ವಿಚಾರವಾಗಿ ಸೆ.21ರಂದು ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ಎರಡು ಚರಣಗಳ ಗಾಯನದ ಬಳಿಕ ಉಳಿದ ಚರಣಗಳನ್ನು ಹಾಡಿ ಸರ್ಕಾರದ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಕುರಿತು ರಾಜ್ಯ ಸರ್ಕಾರವು ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿರುವ ಜೋಶಿ, 'ವಂದೇ ಮಾತರಂ'ನಂತಹ ರಾಷ್ಟ್ರೀಯ ಮಹತ್ವದ ಗೀತೆಯ ವಿಚಾರದಲ್ಲಿ ರಾಜಕೀಯ ಉದ್ದೇಶದಿಂದ ಯಾವುದೇ ನಿರ್ಧಾರ ಕೈಗೊಳ್ಳಬಾರದು ಎಂದು ಹೇಳಿದ್ದಾರೆ.

ರಾಷ್ಟ್ರೀಯ ಗೌರವಕ್ಕೆ ಸಂಬಂಧಿಸಿದ ವಿಷಯದಲ್ಲಿ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕ್ರಮದ ಕುರಿತು ಸಂಸತ್ತಿನಲ್ಲಿ ವಿಷಯ ಪ್ರಸ್ತಾಪಿಸಿ, ರಾಜ್ಯ ಸರ್ಕಾರದ ನಿಲುವನ್ನು ದೇಶದ ಗಮನಕ್ಕೆ ತರಲಾಗುವುದು ಎಂದು ಜೋಶಿ ತಿಳಿಸಿದ್ದಾರೆ. 'ವಂದೇ ಮಾತರಂ'ಗೆ ಸಂಬಂಧಿಸಿದ ವಿವಾದದ ಬಗ್ಗೆ ಸರ್ಕಾರದಿಂದ ಸಮಗ್ರ ಸ್ಪಷ್ಟನೆ ನೀಡುವಂತೆ ಅವರು ಆಗ್ರಹಿಸಿದ್ದಾರೆ.

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481

ವಿಕ್ರಮ ವಾಹಿನಿ

## ಸವಿ ವಾಹಿನಿ

ಪ್ರತಿಯೊಂದು ಚಿಕ್ಕ ಪುಟ್ಟ
ಸಂತೋಷವನ್ನು ಸಂಭ್ರಮಿಸಲು ಕಲಿತಾಗ ಜೀವನವೇ
ಸ್ವರ್ಗವೆನಿಸುತ್ತದೆ.

## ದಿನ ಪಂಚಾಂಗ

ಸೆಪ್ಟಂಬರ್, 22-2026, ಮಂಗಳವಾರ ವರ್ಷ ಋತು,
ಭಾದ್ರಪದ ಮಾಸ, ಶುದ್ಧ ಪಕ್ಷ
ಏಕಾದಶಿ ತಿಥಿ ರಾ.7:42
ಉತ್ತರಾಷಾಢ ನಕ್ಷತ್ರ ಬೆ.6:28
ರಾಹುಕಾಲ ಮ 3:14-4:45
ಸರ್ವತ್ರ ಏಕಾದಶಿ, ಝುಲಝೂಲನೀ ಏಕಾದಶಿ, ಮೇಲುಕೋಟೆ ಪವಿತ್ರೋತ್ಸವಾರಂಭ, ರೋಸ್ ಡೇ(ಕ್ಯಾನ್ಸರ್ ರೋಗಿಗಳ ಯೋಗಕ್ಷೇಮ) , ಗೋರಲೋಟೆ ವಿದ್ಯಾಸಂಪೂರ್ಣ ಆರಾಧನೆ, ಕಮಲಾಪುರ ವಿದ್ಯಾಧಿರಾಜ ಆರಾಧನೆ, ಪ್ರಸನ್ನವೆಂಕಟದಾಸ ಆರಾಧನೆ, ಮಾಡಾಳುಗ್ರಾಮ ಶ್ರೀ ಗೌರಮ್ಮದೇವಿ ಮಹಾಮಂಗಳಾರತಿ

## ಆಧ್ಯಾತ್ಮ

### 'ಮಿಶ್ರತಳಿ ಹಾಲಿನ ಉತ್ಪನ್ನಗಳಿಗೂ ದೇಶಿ ಗೋವಿನ ಉತ್ಪನ್ನಗಳಿಗೂ ವ್ಯತ್ಯಾಸವಿದೆ'



● ವಿಕ್ರಮ ವಾಹಿನಿ । ಗೋಕರ್ಣ

ಈಚಲ ಮರದಲ್ಲಿ ಮಾವಿನ ಹಣ್ಣು ಬಿಡುವುದಿಲ್ಲ. ಮಾವಿನ ಮರದಲ್ಲಿ ಬಿಟ್ಟ ಹಣ್ಣಿಗಷ್ಟೇ ಮಾವಿನ ಹಣ್ಣು ಎನ್ನುವುದು. ಹಾಗೆಯೇ ದೇಶೀ ಗೋವಿನ ಹಾಲಿನಿಂದ ತಯಾರಾದ ತುಪ್ಪಕ್ಕಷ್ಟೇ ತುಪ್ಪ ಎಂದು ಹೇಳಬಹುದು. ಮೂಲದಲ್ಲಿ ಗೋವು ಇಲ್ಲದ ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪಗಳು ನಕಲಿ ಎನಿಸಿಕೊಳ್ಳುತ್ತದೆ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ 21.09.2026 ರಂದು 'ಅನ್ನಂ ಬ್ರಹ್ಮ' ಮಾಲಿಕೆಯಲ್ಲಿ ತುಪ್ಪದ ಕುರಿತಾಗಿ ಪ್ರವಚನ ಅನುಗ್ರಹಿಸಿದ ಶ್ರೀಗಳು, ಉತ್ಕೃಷ್ಟ ಮೂಲದ್ರವ್ಯ ಹಾಗೂ ಸಮರ್ಪಕವಾದ ಸಂಸ್ಕಾರದಿಂದ ಮಾತ್ರ ಶ್ರೇಷ್ಠ ತುಪ್ಪ ಲಭ್ಯವಾಗುತ್ತದೆ. ಹಸು ಹಾಗೂ ಎಮ್ಮೆ ಹೇಗೆ ಬೇರೆಬೇರೆಯೋ, ದೇಶಿ ಗೋವು ಹಾಗೂ ಮಿಶ್ರತಳಿ ಹಸು ಕೂಡ ಅಷ್ಟೇ ವಿಭಿನ್ನ. ಅವುಗಳು ಇಂದಿನ ವೈಜ್ಞಾನಿಕ ಪದ್ಧತಿಯಲ್ಲಿಯೂ ಸಂಪೂರ್ಣ ಭಿನ್ನವಾಗಿ ಗುರುತಿಸಲ್ಪಟ್ಟಿದೆ. ಮಿಶ್ರತಳಿಯ ಹಸುಗಳು ಮಾನವನ ಹಸ್ತಕ್ಷೇಪದ ಕಾರಣದಿಂದ ಗುಣಗಳನ್ನೇ ಕಳೆದುಕೊಂಡಿದ್ದು, ಅವುಗಳಿಂದ ಪಡೆಯುವ ಹಾಲು - ತುಪ್ಪಗಳನ್ನು ದೇಶಿ ಗೋವಿನ ಹಾಲು - ತುಪ್ಪಗಳ ಜೊತೆಗೆ ಹೋಲಿಸಲು ಆಗದು. ತುಪ್ಪಕ್ಕೆ ಹೇಳಿರು ಸದ್ಗುಣಗಳು ದೇಶಿ ಗೋತಳಿಯ ತುಪ್ಪಕ್ಕಷ್ಟೇ ಸೀಮಿತ ಎಂದರು.

ಅನ್ನವನ್ನೋ, ಸಾರನ್ನೋ ಎರಡನೇ ಬಾರಿ ಬಿಸಿ ಮಾಡಿದರೆ ಅದು ತನ್ನ ತನವನ್ನು ಕಳೆದುಕೊಳ್ಳುತ್ತದೆ. ಆದರೆ ತುಪ್ಪದ ಸಾಮರ್ಥ್ಯ ಅಪರಿಮಿತವಾಗಿದ್ದು, ತುಪ್ಪವನ್ನು ಸಾವಿರ ಬಾರಿ ಬಿಸಿ ಮಾಡಿದರೂ ಅದು ಕೆಡುವುದಿಲ್ಲ. ಸಾವಿರ ಬಾರಿ ಪಾಕ ಮಾಡಿದಾಗ ತುಪ್ಪ ಅಪರಿಮಿತವಾದ ಶಕ್ತಿಯನ್ನು ಹೊಂದುತ್ತದೆ. ತುಪ್ಪವು ಅಗ್ನಿವರ್ಧಕವಾದರೂ ದೇಹಕ್ಕೆ ತಂಪುಂಟು ಮಾಡುತ್ತದೆ. ಒಂದೇ ಸಮಯದಲ್ಲಿ ಬೇರೆಬೇರೆ ಕಾರ್ಯಗಳನ್ನು ಮಾಡುವ ವಿಶೇಷ ಶಕ್ತಿ ತುಪ್ಪಕ್ಕಿದೆ ಎಂದು ಹೇಳಿದರು.

ನಿಜವಾದ ತುಪ್ಪ ಜಠರಾಗ್ನಿಯನ್ನು ಉದ್ದೀಪನಗೊಳಿಸಿದರೆ, ಮಿಶ್ರತಳಿ ಹಸುವಿನ ತುಪ್ಪ ಹಾಗೂ ಸಮರ್ಪಕ ಸಂಸ್ಕಾರ ಸಿಗದೇ ನೇರವಾಗಿ ಹಾಲಿನ ಕೆನೆಯಿಂದ ತಯಾರಿಸಿದ ತುಪ್ಪ ಇದಕ್ಕೆ ವಿರುದ್ಧವಾಗಿ ಮಂದಾಗ್ನಿಗೆ ಕಾರಣವಾಗಬಹುದು. ಹೀಗೆ ನೈಜ ತುಪ್ಪದ ಪ್ರಯೋಜನಕ್ಕೂ ತುಪ್ಪದ ಹೆಸರಿನ ದ್ರವಕ್ಕೂ ಪರಿಣಾಮದಲ್ಲಿ ವ್ಯತ್ಯಾಸವಿದ್ದು, ತುಪ್ಪದ ಹೆಸರಿನ ದ್ರವ ಕೇವಲ ಕ್ಯಾಲರಿಗಳ ಪೂರೈಕೆ ಮಾತ್ರ ಸೀಮಿತವಾಗಬಹುದು ಎಂದು ಎಚ್ಚರಿಸಿದರು.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಕೆ.ಎಸ್. ಗುರುಮೂರ್ತಿ ಶಿಕಾರಿಪುರ, ಸೋನಿ ಕಂಪನಿಯ ಪ್ರಮುಖರಾದ ವಿಶ್ವಾವಸು ಮರಾಠೆ ಉಪಸ್ಥಿತರಿದ್ದು, ಶ್ರೀಗಳಿಂದ ಆಶೀರ್ವಾದ ಪಡೆದರು. ಸುಬ್ರಹ್ಮಣ್ಯ ಹೆಗಡೆ ಹೊಸಪೇಟೆ ಕುಟುಂಬದವರಿಂದ ಗುರುಭಿಕ್ಷಾ ಸೇವೆ ಸಮರ್ಪಿಸಿದರು. ರಮೇಶ್ ಕಟ್ಟ, ಶ್ರೀರಾಮ, ದಿನಪ್ರಧಾನರಾಗಿ ಲಕ್ಷ್ಮೀಶ್ ಎನ್ ಭಟ್ ದಂಪತಿಗಳು ಉಪಸ್ಥಿತರಿದ್ದರು.

ಗುಡಿಗಾರ ಸಮಾಜದಿಂದ ಸ್ವರ್ಣಪಾದುಕಾ ಪೂಜೆ: ಶ್ರೀಮಠದ ಗುರುಪರಂಪರೆಯನ್ನು ಪಾರಂಪರಿಕವಾಗಿ ಆಶ್ರಯಿಸಿರುವ ಗುಡಿಗಾರ ಸಮಾಜದಿಂದ ಸ್ವರ್ಣಪಾದುಕಾ ಪೂಜೆ ನಡೆಯಿತು. ನಂದಕುಮಾರ್ ಗುಡಿಗಾರ್, ವಿ.ಜಿ. ಶೇಟ್ ಸೇರಿದಂತೆ ಸಮಾಜದ ಪ್ರಮುಖರು ಉಪಸ್ಥಿತರಿದ್ದು, ಶ್ರೀಗಳಿಂದ ಆಶೀರ್ವಾದ ಪಡೆದರು.

# ಗಜಗೌರಿ ವ್ರತದ ಹಿರಿಮೆ

## ಕುಂತಿಯ ಭಕ್ತಿ, ಗಾಂಧಾರಿಯ ಮತ್ಸರ, ಅರ್ಜುನನ ಶೌರ್ಯ-ಜನಪದದ ಸ್ವಾರಸ್ಯ ಕಥನ

ಭಾರತೀಯ ಸಂಸ್ಕೃತಿಯಲ್ಲಿ ಗೌರೀಪೂಜೆಗೆ ವಿಶಿಷ್ಟ ಸ್ಥಾನ. ಗೌರಿ ಎಂದರೆ ಸೌಭಾಗ್ಯ, ಸಂತಾನ, ಸಮೃದ್ಧಿ ಹಾಗೂ ಮಂಗಳದ ಸಂಕೇತ. ಕರ್ನಾಟಕದ ವಿವಿಧ ಭಾಗಗಳಲ್ಲಿ ಗೌರಿಯನ್ನು ಹಲವು ರೂಪಗಳಲ್ಲಿ ಆರಾಧಿಸುವ ಪರಂಪರೆಯಿದೆ. ಸ್ವರ್ಣಗೌರಿ, ಜೇಷ್ಠಾಗೌರಿ, ದಿವಸಗೌರಿ, ಶುಕ್ರವಾರದ ಗೌರಿ ಹೀಗೆ ಹಲವು ಆಚರಣೆಗಳ ನಡುವೆ ಗಜಗೌರಿ ವ್ರತ ತನ್ನದೇ ಆದ ಪೌರಾಣಿಕ ಹಾಗೂ ಜನಪದ ವೈಶಿಷ್ಟ್ಯವನ್ನು ಹೊಂದಿದೆ.

ಗಜದ ಮೇಲೆ ಕುಳಿತ ಗೌರಿಯನ್ನು ಆರಾಧಿಸುವ ಈ ವ್ರತದ ಕಥೆ ಹರಿಕಥೆ, ಯಕ್ಷಗಾನ, ಗೀತಕಥನ ಮತ್ತು ಜನಪದ ಗೀತೆಗಳಲ್ಲಿ ಹಲವು ಬಗೆಯಲ್ಲಿ ರೂಪುಗೊಂಡಿದೆ. ಅದರಲ್ಲೂ ಪಾಂಡವರ ತಾಯಿ ಕುಂತಿ ಆಚರಿಸಿದ ಗಜಗೌರಿ ಪೂಜೆಯ ಕಥನ ಜನಮಾನಸದಲ್ಲಿ ಅತ್ಯಂತ ಜನಪ್ರಿಯ.

**ಗಾಂಧಾರಿ-ಕುಂತಿಯ ಗಜಗೌರಿ:** ಭಾದ್ರಪದ ಬಹುಳ ಅಷ್ಟಮಿಯಂದು ಗಜಗೌರಿ ವ್ರತವನ್ನು ಆಚರಿಸುವ ಸಂಪ್ರದಾಯವಿದೆ. ವ್ರತಕಥೆಯೊಂದರ ಪ್ರಕಾರ ಕೃಷ್ಣಾನದಿಯ ತೀರದಲ್ಲಿ ಮಂಗಳಗೌರಿ ಎಂಬ ಪಟ್ಟಣವಿತ್ತು. ಅಲ್ಲಿದ್ದ ಸೋಮಯಾಜಿ ಎಂಬ ಶ್ರೋತ್ರಿಯನ ಪತ್ನಿಯು ಜೇಡಿಮಣ್ಣಿನಿಂದ ಆನೆಯ ಮೇಲೆ ಕುಳಿತ ಗೌರಿದೇವಿಯ ಪ್ರತಿಮೆಯನ್ನು ತಯಾರಿಸಿ ಭಕ್ತಿಯಿಂದ ಪೂಜಿಸುತ್ತಿದ್ದಳು. ವ್ರತದ ಫಲವಾಗಿ ಆಕೆಗೆ ಪುತ್ರಪೌತ್ರಾದಿ ಸಂಪತ್ತು ದೊರೆಯಿತು ಎಂಬುದು ಕಥೆಯ ಸಾರ.

ಹೀಗಾಗಿ ಸಂತಾನಕ್ಷೇಮ, ಕುಟುಂಬದ ಸಮೃದ್ಧಿ ಮತ್ತು ಸೌಭಾಗ್ಯಕ್ಕಾಗಿ ಈ ವ್ರತವನ್ನು ಆಚರಿಸುವ ಪರಂಪರೆ ಬೆಳೆದಿದೆ.

ಮಹಾಭಾರತದ ಪ್ರಸಂಗಕ್ಕೆ ಬಂದರೆ, ಗಾಂಧಾರಿಗೆ ಗಜಗೌರಿ ಪೂಜೆ ಮಾಡಬೇಕೆಂಬ ಆಸೆ ಮೂಡುತ್ತದೆ. ವೇದವ್ಯಾಸರ ಸಲಹೆಯಂತೆ ಪೂಜೆಗೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಸಿಕೊಂಡು, ಬಂಧುಬಳಗವನ್ನು ಆಹ್ವಾನಿಸಿ, ಅರಮನೆಯ ಮಹಿಳೆಯರಿಗೆ ಬಾಗಿನ ನೀಡಿ ಅದ್ದೂರಿಯಾಗಿ ವ್ರತ ಆಚರಿಸಲು ಮುಂದಾಗುತ್ತಾಳೆ. ಆದರೆ ಪಾಂಡವರನ್ನೂ, ಕುಂತಿಯನ್ನೂ ಉದ್ದೇಶಪೂರ್ವಕವಾಗಿ ಆಹ್ವಾನಿಸುವುದಿಲ್ಲ.

ಪೂಜೆಯ ಸುದ್ದಿ ಕೇಳಿ ಆಹ್ವಾನಕ್ಕಾಗಿ ಕಾದಿದ್ದ ಕುಂತಿಗೆ ಇದರಿಂದ ತುಂಬಾ ಬೇಸರವಾಗುತ್ತದೆ. ತಾಯಿ ವ್ಯಥೆಪಡುವುದನ್ನು ಕಂಡ ಪಾಂಡವರು, "ನಾವೂ ಗಜಗೌರಿ ಪೂಜೆ ಮಾಡೋಣ; ಕೌರವರು ಮಾಡಿದುದಕ್ಕಿಂತ ವೈಭವದಿಂದ ಮಾಡೋಣ" ಎಂದು ಸಮಾಧಾನಪಡಿಸುತ್ತಾರೆ.

ಅಷ್ಟರಲ್ಲಿ ನಾರದರು ಪ್ರತ್ಯಕ್ಷರಾಗುತ್ತಾರೆ. "ತಾಯಿಯ ಅಭೀಪ್ಸೆಯನ್ನು ಪೂರೈಸುವುದು ಮಕ್ಕಳ ಕರ್ತವ್ಯ. ಸ್ವರ್ಗದಿಂದ ಐರಾವತ, ಕಾಮಧೇನು, ಕಲ್ಪವೃಕ್ಷ, ಉಚ್ಚೈಃಶ್ರವಸ್ಸು ಮೊದಲಾದ ಅಮೂಲ್ಯ ವಸ್ತುಗಳನ್ನು ತರಿಸಿ ಗಜಗೌರಿಯನ್ನು ವೈಭವದಿಂದ ಪೂಜಿಸಿ" ಎಂದು ಸಲಹೆ ನೀಡುತ್ತಾರೆ.

**ಅರ್ಜುನನ ಬಾಣದ ಏಣಿ:** ನಾರದರು ಅಲ್ಲಿಗೆ ನಿಲ್ಲುವುದಿಲ್ಲ. ದೇವೇಂದ್ರನ ಬಳಿಗೂ ತೆರಳಿ, ಪಾಂಡವರಿಗೆ ಸ್ವರ್ಗದ ಅಮೂಲ್ಯ ವಸ್ತುಗಳು ಬೇಕಾಗಿವೆ ಎಂದು ತಿಳಿಸುತ್ತಾರೆ. ಆದರೆ ಅವುಗಳನ್ನು ಭೂಲೋಕಕ್ಕೆ ಕಳುಹಿಸುವ ಮುನ್ನ ಸ್ವರ್ಗದಿಂದ ಭೂಮಿಗೆ ಏಣಿ ಅಥವಾ ಸೇತುವೆ ನಿರ್ಮಿಸಲಿ ಎಂಬ ಷರತ್ತನ್ನು ದೇವೇಂದ್ರನಿಂದ ಹಾಕಿಸುತ್ತಾರೆ.

ಇದರಿಂದ ಪಾಂಡವರು ಮತ್ತು ದೇವೇಂದ್ರನ ನಡುವೆ ವಿಚಿತ್ರ ಸನ್ನಿವೇಶ ಸೃಷ್ಟಿಯಾಗುತ್ತದೆ. ಆದರೆ ಅರ್ಜುನ ತಲೆಕೆಡಿಸಿಕೊಳ್ಳುವುದಿಲ್ಲ. ಶ್ರೀಕೃಷ್ಣನ ನೆರವಿನಿಂದ ತನ್ನ ಬಾಣಗಳಿಂದಲೇ ಸ್ವರ್ಗದಿಂದ ಭೂಮಿಗೆ ಏಣಿಯನ್ನು ನಿರ್ಮಿಸುತ್ತಾನೆ. ಅನಿವಾರ್ಯವಾಗಿ ದೇವೇಂದ್ರನು ಐರಾವತ, ಉಚ್ಚೈಃಶ್ರವಸ್ಸು ಸೇರಿದಂತೆ ಪೂಜೆಗೆ ಬೇಕಾದ ವಸ್ತುಗಳನ್ನು ಕಳುಹಿಸಬೇಕಾಗುತ್ತದೆ.

ಭೀಮನು ಜೇಡಿಮಣ್ಣಿನ ಗುಡ್ಡವನ್ನೇ ಮನೆ ಬಾಗಿಲಿಗೆ ತಂದು ಹಾಕುತ್ತಾನೆ. ವಿಶ್ವಕರ್ಮನು ಭವ್ಯವಾದ ಗೌರಿಮೂರ್ತಿಯನ್ನು ನಿರ್ಮಿಸಿಕೊಡುತ್ತಾನೆ. ಐರಾವತದ ಮೇಲೆ ಅಂಬಾರಿಯಲ್ಲಿ ಗೌರಿಯನ್ನು ಕುಳ್ಳಿರಿಸಿ ವೈಭವದ ಮೆರವಣಿಗೆ ನಡೆಸಲಾಗುತ್ತದೆ.

ಇತ್ತ ಗಾಂಧಾರಿಯೂ ಪಾಂಡವರು ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡಲು ಬರುತ್ತಾಳೆ. ಕುಂತಿ ಆಕೆಯನ್ನು ಆತ್ಮೀಯವಾಗಿ ಬರಮಾಡಿಕೊಂಡು, ಸೊಸೆಯರ ಮೂಲಕ ಅರಿಶಿನ-ಕುಂಕುಮ ನೀಡಿ ಸತ್ಕರಿಸುತ್ತಾಳೆ. ನಂತರ ಐರಾವತದ ಮೇಲಿರುವ ಗೌರಿಯನ್ನು ಪೂಜಿಸಿ, ಊರಿನ ಜನರಿಗೆ ಔತಣ ನೀಡುತ್ತಾಳೆ. ಸುಮಂಗಲಿಯರಿಗೆ ದಕ್ಷಿಣೆ ನೀಡಲು ಕಲ್ಪವೃಕ್ಷವನ್ನೇ ಬಳಸುತ್ತಾಳೆ. ಪಾರಿಜಾತದ ಹೂಗಳಿಂದ ಗೌರಿಯನ್ನು ಅಲಂಕರಿಸುತ್ತಾಳೆ.

ಈ ವೈಭವವನ್ನು ಕಂಡ ಗಾಂಧಾರಿ ಇನ್ನಷ್ಟು ಅಸಮಾಧಾನಗೊಂಡು ಹಸ್ತಿನಾವತಿಗೆ ಮರಳುತ್ತಾಳೆ ಎಂಬುದು ಕಥನ.

**ಜನಪದದಲ್ಲಿ ಅರ್ಜುನನ ಬಾಣದ ಏಣಿ:** ಗಜಗೌರಿ ವ್ರತದ ಈ ಕಥೆ ಶಾಸ್ತ್ರಕಥೆಯಾಗಿ ಮಾತ್ರ ಉಳಿದಿಲ್ಲ. ಕನ್ನಡ ಜನಪದದ ಕಲ್ಪನಾಶಕ್ತಿಯಲ್ಲಿ ಅದು ಇನ್ನಷ್ಟು ವಿಸ್ತಾರಗೊಂಡಿದೆ. ಅರ್ಜುನನು ಅಮರಾವತಿಗೆ



ಓಲೆ ಬರೆದು ಬಿಳಿಯಾನೆ, ಬಿಳಿಕುದುರೆಗಳನ್ನು ಕಳುಹಿಸಬೇಕೆಂದು ಕೇಳುವುದು, ದೇವೇಂದ್ರನಿಗೆ ಆ ಓಲೆ ತಲುಪುವುದು, ಅವುಗಳನ್ನು ಭೂಲೋಕಕ್ಕೆ ಕಳುಹಿಸುವುದು ಇವೆಲ್ಲ ಜನಪದ ಗೀತೆಗಳಲ್ಲಿ ಸುಂದರವಾಗಿ ಮೂಡಿಬಂದಿವೆ.

ಜನಪದ ಗೀತೆಯೊಂದರಲ್ಲಿ ಅರ್ಜುನನ ಮನೋಭಾವ ಹೀಗೆ ವ್ಯಕ್ತವಾಗುತ್ತದೆ:

"ಮೂರು ಲೋಕದೊಳೊಬ್ಬ ಅರ್ಜುನ ಫಲ್ಗುಣ ಅಮರಾವತಿಗೆ
ಓಲೆ ಬರೆದಾನು ಬಿಳಿಯಾನೆ ಬಿಳಿ ಕುದುರೆ ಬರಬೇಕು;
ಬಿಳಿಯಾನೆ ಬಿಳಿ ಕುದುರೆ ಬಾರದೆ ಇದ್ದರೆ
ಅಗ್ನಿಯಲ್ಲಿ ಜೀವ ಕೊಡುತ್ತೇನೆ "

ಈ ಗೀತೆಯಲ್ಲಿ ಅರ್ಜುನನ ಸಾಹಸ, ದೇವೇಂದ್ರನೊಂದಿಗೆ ನಡೆದ ಸಂವಹನ ಹಾಗೂ ಪಾಂಡವರ ಗಜಗೌರಿ ವ್ರತದ ವೈಭವವನ್ನು ಸರಳ ಜನಭಾಷೆಯಲ್ಲಿ ಕಟ್ಟಿಕೊಡಲಾಗಿದೆ.

ಮತ್ತೊಂದು ಜನಪದ ಕಥನದಲ್ಲಿ ಸ್ವರ್ಗದಿಂದ ಬಂದ ಪೂಜಾ ಸಾಮಗ್ರಿಗಳು ಮರಳಿ ದೇವಲೋಕಕ್ಕೆ ತೆರಳುವ ಸಂದರ್ಭದಲ್ಲಿ ಪಾಂಡವರು ಅವುಗಳನ್ನು ಭೂಲೋಕದಲ್ಲೇ ಉಳಿಸಿಕೊಳ್ಳುತ್ತಾರೆ. ಭೀಮನು ಐರಾವತವನ್ನು, ಧರ್ಮರಾಯನು ಅವರೆಕಾಳನ್ನು, ನಕುಲ-ಸಹದೇವರು ಭತ್ತವನ್ನು, ಅರ್ಜುನನು ವೀಳ್ಯದೆಲೆ-ಅಡಿಕೆ ಮೊದಲಾದವುಗಳನ್ನು ತಡೆದು ನಿಲ್ಲಿಸುತ್ತಾರೆ ಎಂಬ ಸ್ವಾರಸ್ಯಕರ ಕಲ್ಪನೆಯಿದೆ.

ನಂತರ ಕುಂತಿ ಅವುಗಳನ್ನು ಭೂಮಿಯಲ್ಲಿ ಬೆಳೆಸುವಂತೆ ಹೇಳಿದಳು; ಹೀಗಾಗಿ ಅವರೆಕಾಳು ಮತ್ತು ವೀಳ್ಯದೆಲೆಯ ಕೃಷಿ ಭೂಲೋಕದಲ್ಲಿ ಆರಂಭವಾಯಿತು ಎಂಬ ರೈತಾಪಿ ಜನರ ನಂಬಿಕೆಯೂ ಜನಪದದಲ್ಲಿ ಕಾಣಿಸುತ್ತದೆ.

ಮತ್ತೊಂದು ಕಥನದಲ್ಲಿ ಗಾಂಧಾರಿಗೆ ಗಜಗೌರಿ ವ್ರತ ಮಾಡುವಂತೆ ಪ್ರೇರೇಪಿಸುವುದೂ, ಕುಂತಿಗೆ ಆ ವಿಚಾರವನ್ನು ತಿಳಿಸಿ ಆಕೆಯಲ್ಲೂ ಪಣತೊಡುವ ಮನೋಭಾವ ಮೂಡಿಸುವುದೂ ನಾರದರೆಂದು ಹೇಳಲಾಗಿದೆ. "ಗಾಂಧಾರಿ ಮಣ್ಣಿನ ಆನೆಯ ಮೇಲೆ ಗೌರಿಯನ್ನು ಕೂರಿಸಿದರೆ, ನಾನು ಇಂದ್ರನ ಐರಾವತದ ಮೇಲೆಯೇ ಗೌರಿಯನ್ನು ಕೂರಿಸಿ ಪೂಜಿಸುತ್ತೇನೆ" ಎಂದು ಕುಂತಿ ಸಂಕಲ್ಪ ಮಾಡುತ್ತಾಳೆ ಎಂಬುದು ಆ ಕಥೆಯ ಸ್ವಾರಸ್ಯ.

**ಒಂಬತ್ತರ ಮಹತ್ವ:** ಗಜಗೌರಿ ವ್ರತದ ಆಚರಣೆಯಲ್ಲಿ ಒಂಬತ್ತು ಎಂಬ ಸಂಖ್ಯೆಗೆ ವಿಶೇಷ ಮಹತ್ವವಿದೆ. ಕೆಲವು ಸಂಪ್ರದಾಯಗಳಲ್ಲಿ ಒಂಬತ್ತು ವರ್ಷಗಳ ಕಾಲ ವ್ರತವನ್ನು ಆಚರಿಸಿ, ನಂತರ ಉದ್ಯಾಪನೆ ಮಾಡುವ ಪದ್ಧತಿಯಿದೆ.

ಗೌರಿಯ ಮೂರ್ತಿಯನ್ನು ಜೇಡಿಮಣ್ಣು, ಕಂಚು, ಬೆಳ್ಳಿ ಅಥವಾ ಚಿನ್ನದಿಂದ ತಯಾರಿಸುವ ವಾಡಿಕೆ ಕೆಲವು ಕಡೆಗಳಲ್ಲಿದೆ. ಗಜದ ಮೇಲೆ ಕುಳಿತ ಗೌರಿಯೇ ಈ ವ್ರತದ ವಿಶೇಷ ರೂಪ.

ಪೂಜೆಯಲ್ಲಿ ಒಂಬತ್ತು ವೀಳ್ಯದೆಲೆ, ಒಂಬತ್ತು ಅಡಿಕೆ, ಒಂಬತ್ತು ಅರಿಶಿನದ ಕೊಂಬು, ಒಂಬತ್ತು ಬಗೆಯ ಹೂವು, ಪತ್ರೆ ಹಾಗೂ ಹಣ್ಣುಗಳನ್ನು ಅರ್ಪಿಸುವ ಸಂಪ್ರದಾಯವೂ ಇದೆ. ಇವುಗಳನ್ನು ಬಾಗಿನದೊಂದಿಗೆ ಸುಮಂಗಲಿಯರಿಗೆ ನೀಡುತ್ತಾರೆ. ಒಂಬತ್ತು ಗಂಟುಗಳ ದಾರವನ್ನು ಕೈಗೆ ಕಟ್ಟಿಕೊಳ್ಳುತ್ತಾರೆ. ಒಂಬತ್ತು ದೀಪಗಳಿಂದ ಆರತಿ ಬೆಳಗಿಸಿ ಗೌರಿಯ ಅನುಗ್ರಹವನ್ನು ಕೋರುತ್ತಾರೆ.

**ಪಿತೃಪಕ್ಷದಲ್ಲೊಂದು ಮಂಗಳಾಚರಣೆ:** ಗಜಗೌರಿ ವ್ರತದ ಮತ್ತೊಂದು ವೈಶಿಷ್ಟ್ಯವೆಂದರೆ ಅದು ಪಿತೃಪಕ್ಷದ ಅವಧಿಯಲ್ಲಿ ಬರುವುದೆಂಬುದು. ಪಿತೃಪಕ್ಷವನ್ನು ಸಾಮಾನ್ಯವಾಗಿ ಪಿತೃಸ್ಮರಣೆ ಮತ್ತು ಶ್ರಾದ್ಧಕರ್ಮಗಳಿಗೆ ಮೀಸಲಾದ ಕಾಲವೆಂದು ಪರಿಗಣಿಸಿದರೂ, ಇದೇ ಅವಧಿಯಲ್ಲಿ ಗಜಗೌರಿಯ ಆರಾಧನೆ ನಡೆಯುವುದು ಆಚರಣಾ ವೈವಿಧ್ಯದ ಅಪೂರ್ವ ಉದಾಹರಣೆ.

ಕರ್ನಾಟಕದ ಉತ್ತರ ಭಾಗಗಳಲ್ಲಿ, ಅದರಲ್ಲೂ ಕೆಲವು ಪ್ರದೇಶಗಳಲ್ಲಿ, ಈ ವ್ರತವನ್ನು ವಿಶೇಷ ಭಕ್ತಿಯಿಂದ ಆಚರಿಸುವ ಪರಂಪರೆಯಿದೆ. ಗಜದ ಮೇಲೆ ಕುಳಿತ ಗೌರಿಯ ಮಣ್ಣಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ, ಹಲವು ವರ್ಷಗಳ ಕಾಲ ಪೂಜಿಸಿ, ಕೊನೆಯಲ್ಲಿ ವೈಭವದ ಮೆರವಣಿಗೆಯೊಂದಿಗೆ ವಿಸರ್ಜಿಸುವ ಸಂಪ್ರದಾಯವೂ ಕಂಡುಬರುತ್ತದೆ.

ಕೆಲವು ಕಡೆಗಳಲ್ಲಿ ಈ ವ್ರತವನ್ನು ಒಂಬತ್ತು ವರ್ಷಗಳ ಕಾಲ ಆಚರಿಸಿ ದಸರೆಯ ಸಂದರ್ಭದಲ್ಲಿ ಉದ್ಯಾಪನೆ ಮಾಡುತ್ತಾರೆ. ವ್ರತದ ಅವಧಿಯಲ್ಲಿ ಮಹಿಳೆಯರು ಭಕ್ತಿಯಿಂದ ಪೂಜೆಯಲ್ಲಿ ಪಾಲ್ಗೊಂಡು, ಬಾಗಿನ ಅರ್ಪಿಸಿ, ಗೌರಿಯ ಆಶೀರ್ವಾದವನ್ನು ಕೋರುತ್ತಾರೆ.

**ಆಚರಣೆಯ ಹಿಂದಿನ ಆಶಯ:** ಗಜಗೌರಿ ವ್ರತ ಕೇವಲ ಒಂದು ಪೌರಾಣಿಕ ಕಥೆಯ ಆಚರಣೆಯಲ್ಲ. ಅದರೊಳಗೆ ಕುಟುಂಬದ ಕ್ಷೇಮ, ಸಂತಾನಾಭಿವೃದ್ಧಿ, ಸೌಭಾಗ್ಯ, ಸಮೃದ್ಧಿ ಮತ್ತು ಸ್ತ್ರೀಶಕ್ತಿಯ ಆರಾಧನೆಯ ಆಶಯಗಳು ಅಡಕವಾಗಿವೆ.

ಗಾಂಧಾರಿ-ಕುಂತಿಯ ಕಥನದಲ್ಲಿ ಮತ್ಸರ, ಭಕ್ತಿ, ಆತ್ಮಗೌರವ, ಮಾತೃಭಾವ ಮತ್ತು ಸಹೋದರರ ಕರ್ತವ್ಯಪ್ರಜ್ಞೆ ಮೊದಲಾದ ಮಾನವೀಯ ಭಾವನೆಗಳು ಬೆರೆತಿವೆ. ಅರ್ಜುನನ ಬಾಣದ ಏಣಿ ಜನಪದದ ಕಲ್ಪನಾಶಕ್ತಿಯ ಪ್ರತೀಕವಾದರೆ, ಕುಂತಿಯ ಗಜಗೌರಿ ಪೂಜೆ ತಾಯಿಯ ಆಸೆಯನ್ನು ಮಕ್ಕಳೇ ಈಡೇರಿಸುವ ಭಾರತೀಯ ಕುಟುಂಬಧರ್ಮದ ಸಂಕೇತವಾಗಿ ಕಾಣುತ್ತದೆ.

ಪೌರಾಣಿಕ ಕಥೆ ತನ್ನದೇ ಆದ ಅರ್ಥವನ್ನು ಹೊಂದಿದ್ದರೆ, ಜನಪದವು ಅದಕ್ಕೆ ತನ್ನ ಕಲ್ಪನೆ ಮತ್ತು ಬದುಕಿನ ಅನುಭವವನ್ನು ಸೇರಿಸಿ ಮತ್ತೊಂದು ರೂಪ ನೀಡಿದೆ. ಹೀಗಾಗಿ ಗಜಗೌರಿ ವ್ರತದ ಕಥನ ಒಂದೇ ಆಗಿಲ್ಲ; ಅದು ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಹೊಸ ರೂಪಗಳನ್ನು ಪಡೆದುಕೊಂಡಿದೆ.

ಮೂಲ ಮಹಾಭಾರತದಲ್ಲಿ ಗಜಗೌರಿ ವ್ರತದ ಪ್ರಸಂಗದ ಸ್ಥಾನ ಮತ್ತು ಅದರ ನಂತರದ ಕಥಾವಿಸ್ತರಣೆಯ ಕುರಿತು ವಿದ್ವಾಂಸರಲ್ಲಿ ಚರ್ಚೆಗಳಿದ್ದರೂ, ಕನ್ನಡ ಜನಪದದಲ್ಲಿ ಈ ಕಥೆ ಪಡೆದಿರುವ ಜನಪ್ರಿಯತೆ ಮಾತ್ರ ಗಮನಾರ್ಹ. ಹರಿಕಥೆ, ಯಕ್ಷಗಾನ, ಗೀತಕಥನ ಮತ್ತು ಮಹಿಳೆಯರ ವ್ರತಗೀತೆಗಳ ಮೂಲಕ ಅದು ತಲೆಮಾರಿನಿಂದ ತಲೆಮಾರಿಗೆ ಹರಿದುಬಂದಿದೆ.

ಆನೆಯ ಮೇಲಿನ ಗೌರಿ ಕೇವಲ ಮಣ್ಣಿನ ಮೂರ್ತಿಯಲ್ಲ; ಅದು ಸ್ತ್ರೀಶಕ್ತಿ, ಸೌಭಾಗ್ಯ, ಸಮೃದ್ಧಿ ಮತ್ತು ಕುಟುಂಬಮಂಗಳದ ಸಂಕೇತ.

ಆಕೆಯ ಆರಾಧನೆಯ ಹಿಂದೆ ಇರುವ ಕಥೆಗಳಲ್ಲಿ ಪುರಾಣವಿದೆ; ಆಚರಣೆಯಲ್ಲಿ ಸಂಸ್ಕೃತಿಯಿದೆ; ಜನಪದದಲ್ಲಿ ಬದುಕಿನ ಸೊಗಡಿದೆ. ಇದೇ ಗಜಗೌರಿ ವ್ರತದ ನಿಜವಾದ ಹಿರಿಮೆ.


**ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)**
**ಸಂಸ್ಕೃತಿ ಚಿಂತಕರು**

# ಪಶ್ಚಿಮ ಘಟ್ಟ ರಕ್ಷಣೆ ಜತೆಗೆ ರೈತರ ಹಿತವೂ ಮುಖ್ಯ: ರಾಮಲಿಂಗಾರೆಡ್ಡಿ

● ವಿಕ್ರಮ ವಾಹಿನಿ । ಬೆಂಗಳೂರು

ಪಶ್ಚಿಮ ಘಟ್ಟಗಳ ಅರಣ್ಯ, ನದಿಗಳು, ಜಲಮೂಲಗಳು ಮತ್ತು ಜೀವವೈವಿಧ್ಯವನ್ನು ರಕ್ಷಿಸುವ ಜತೆಗೆ ರೈತರು, ತೋಟಗಾರರು, ಆದಿವಾಸಿಗಳು ಹಾಗೂ ಸ್ಥಳೀಯ ನಿವಾಸಿಗಳ ಹಕ್ಕು-ಹಿತಾಸಕ್ತಿಗಳನ್ನೂ ಕಾಪಾಡಬೇಕು ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಧಾನಸಭೆಯಲ್ಲಿ ಕಸ್ತೂರಿರಂಗನ್ ವರದಿ ಆಧರಿಸಿ ಕೇಂದ್ರ ಸರ್ಕಾರ ಜು.27ರಂದು ಹೊರಡಿಸಿರುವ ಕರಡು ಅಧಿಸೂಚನೆ ಕುರಿತು ಚರ್ಚೆ ವೇಳೆ ಮಾತನಾಡಿದ ಅವರು, ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಕೃಷಿ, ತೋಟಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ



ಅನಗತ್ಯ ತಡೆ ಉಂಟಾಗಬಾರದು. ಸ್ಥಳೀಯರನ್ನು ಸ್ಥಳಾಂತರಿಸುವ ಪ್ರಶ್ನೆಯಿಲ್ಲ ಎಂದರು.

ಅಕ್ರಮ ಗಣಿಗಾರಿಕೆ, ಮರಳು ಗಣಿಗಾರಿಕೆ, ಮಿತಿಮೀರಿದ ಗುಡ್ಡ ಕಡಿತ, ಒತ್ತುವರಿ ಹಾಗೂ ಹೆಚ್ಚಿನ ಮಾಲಿನ್ಯ ಉಂಟುಮಾಡುವ ವಾಣಿಜ್ಯ ಚಟುವಟಿಕೆಗಳಿಗೆ ಯಾವುದೇ ರಕ್ಷಣೆ ನೀಡುವುದಿಲ್ಲ. ಇವುಗಳ ವಿರುದ್ಧ ಕಾನೂನುಬದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು. ಒಂದು ಗ್ರಾಮದಲ್ಲಿ ಅರಣ್ಯ ಪ್ರದೇಶವಿದೆ ಎಂಬ ಕಾರಣಕ್ಕೆ ಇಡೀ ಗ್ರಾಮವನ್ನು ಒಂದೇ ರೀತಿಯ ನಿಯಂತ್ರಣಕ್ಕೆ ಒಳಪಡಿಸಬಾರದು. ಸರ್ವೆ ನಂಬರ್ ಮಟ್ಟದಲ್ಲಿ ನಿಖರ ನಕ್ಷೆ ಸಿದ್ಧಪಡಿಸಿ, ಕೃಷಿ, ತೋಟಗಾರಿಕೆ, ಜನವಸತಿ, ಅರಣ್ಯ, ಜಲಮೂಲ ಹಾಗೂ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಪ್ರತ್ಯೇಕವಾಗಿ ಗುರುತಿಸಬೇಕು ಎಂದು ಸಚಿವರು ಒತ್ತಾಯಿಸಿದರು.

ಪ್ರಸ್ತಾವಿತ ಗ್ರಾಮಗಳ ಪಟ್ಟಿ ಮತ್ತು ನಕ್ಷೆಗಳನ್ನು ಸಾರ್ವಜನಿಕಗೊಳಿಸಿ, ಗ್ರಾಮ ಪಂಚಾಯಿತಿಗಳ ಮೂಲಕ ಆಕ್ಷೇಪಣೆಗಳನ್ನು ಸ್ವೀಕರಿಸಬೇಕು.

2014ರಿಂದಲೂ ರಾಜ್ಯ ಸರ್ಕಾರ ಕಸ್ತೂರಿರಂಗನ್ ವರದಿ ಸಂಬಂಧ ತನ್ನ ಆಕ್ಷೇಪಣೆ ಮತ್ತು ಸಲಹೆಗಳನ್ನು ಕೇಂದ್ರಕ್ಕೆ ಸಲ್ಲಿಸುತ್ತಿದೆ. 2024ರ ಕರಡು ಅಧಿಸೂಚನೆಯನ್ನೂ ರಾಜ್ಯ ಸಚಿವ ಸಂಪುಟ ತಿರಸ್ಕರಿಸಿತ್ತು. ಇದೀಗ ಜು.27ರ ಕರಡು ಅಧಿಸೂಚನೆಯನ್ನೂ ಅದರ ಪ್ರಸ್ತುತ ರೂಪದಲ್ಲಿ ತಿರಸ್ಕರಿಸಲು ಸೆ.3ರಂದು ಸಚಿವ ಸಂಪುಟ ನಿರ್ಧರಿಸಿದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

# ಎನ್‌ಜಿಟಿಯಿಂದ ಒಂದು ವರ್ಷ ಕಾಲಾವಕಾಶ ಪಡೆದು ಭೌತಿಕ ಸಮೀಕ್ಷೆ ನಡೆಸಿ: ವಿಜಯೇಂದ್ರ

● ವಿಕ್ರಮ ವಾಹಿನಿ । ಬೆಂಗಳೂರು


ಕಸ್ತೂರಿರಂಗನ್ ವರದಿ ವಿಚಾರದಲ್ಲಿ ವಿಶೇಷ ಅಧಿವೇಶನ ಕರೆದು ಕೇವಲ ಕೇಂದ್ರ ಸರಕಾರದ ವಿರುದ್ಧ ನಿರ್ಣಯ ಅಂಗೀಕರಿಸಿ ಕೈತೊಳೆದುಕೊಳ್ಳುವುದು ರಾಜ್ಯ ಸರಕಾರದ ಜವಾಬ್ದಾರಿಯಲ್ಲ. ಪಶ್ಚಿಮಘಟ್ಟ ಸಂರಕ್ಷಣೆಯ ಜೊತೆಗೆ ಕಾಡಂಚಿನ ರೈತರು, ಕುಟುಂಬಗಳು ಹಾಗೂ ಜನಜೀವನವನ್ನು ರಕ್ಷಿಸಲು ರಾಜ್ಯ ಸರಕಾರವೇ ಮುಂದಾಳತ್ವ ವಹಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ವಿಶೇಷ ಅಧಿವೇಶನದಲ್ಲಿ ಮಾತನಾಡಿದ ಅವರು, "ಪಶ್ಚಿಮಘಟ್ಟ ಉಳಿಯಬೇಕು, ನದಿಗಳು ಉಳಿಯಬೇಕು, ಪರಿಸರವೂ ಉಳಿಯಬೇಕು. ಅದೇ ರೀತಿ ಕಾಡಂಚಿನ ಜನರು, ರೈತರು ಮತ್ತು ಅವರ ಜೀವನೋಪಾಯವೂ ಉಳಿಯಬೇಕು. ಈ ಎರಡರ ನಡುವೆ ಸಮತೋಲನ ಸಾಧಿಸುವುದೇ ಸರಕಾರದ ಜವಾಬ್ದಾರಿ" ಎಂದರು.

**'ರಾಜಕೀಯ ಅಸ್ತ್ರ'ವಾಗದಿರಲಿ:** ವಿಶೇಷ ಅಧಿವೇಶನವನ್ನು ಕೇವಲ ಕೇಂದ್ರ ಸರಕಾರದ ಮೇಲೆ ಆರೋಪ ಹೊರಿಸಲು ಬಳಸಿಕೊಳ್ಳಬಾರದು. ರಾಜ್ಯದ ಜನರ ಆತಂಕಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ವೇದಿಕೆಯನ್ನಾಗಿ ಮಾಡಬೇಕು ಎಂದು ವಿಜಯೇಂದ್ರ ಹೇಳಿದರು.

"ನಿರ್ಣಯ ಮಾಡಿ ಕೇಂದ್ರಕ್ಕೆ ಕಳುಹಿಸಿದ ಮಾತ್ರಕ್ಕೆ ಸಮಸ್ಯೆ ಬಗೆಹರಿಯುವುದಿಲ್ಲ. ಎನ್‌ಜಿಟಿ ಮುಂದೆ ಏನಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು. ನ್ಯಾಯಾಂಗ ಪ್ರಕ್ರಿಯೆಯನ್ನೂ ಎದುರಿಸಬೇಕಾಗಿದೆ. ಹೀಗಾಗಿ ರಾಜ್ಯ ಸರಕಾರವೇ ಸಂಪೂರ್ಣ ಸಿದ್ಧತೆಯೊಂದಿಗೆ ಮುಂದುವರಿಯಬೇಕು" ಎಂದು ಹೇಳಿದರು.

**13 ವರ್ಷ ಹಳೆಯ ಸರ್ವೇಗೆ ಇಂದಿನ ಜನರನ್ನು ಬಲಿಕೊಡಬೇಡಿ:** ಕಸ್ತೂರಿರಂಗನ್ ಪ್ರಸ್ತಾವನೆಗೆ ಆಧಾರವಾಗಿರುವ ಉಪಗ್ರಹ ಸಮೀಕ್ಷೆ ಹಲವು ವರ್ಷಗಳ ಹಿಂದಿನದ್ದು. ಅಂದಿನ ಭೂಬಳಕೆ ಮತ್ತು ಇಂದಿನ ವಾಸ್ತವ ಪರಿಸ್ಥಿತಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹೀಗಿರುವಾಗ ಹಳೆಯ ಉಪಗ್ರಹ ಮಾಹಿತಿಯನ್ನೇ ಅಂತಿಮ ಆಧಾರ ಮಾಡುವುದು ಸರಿಯಲ್ಲ ಎಂದು ವಿಜಯೇಂದ್ರ ವಾದಿಸಿದರು.



**1476 ಗ್ರಾಮಗಳಿಗೆ ಸರ್ವೆ ನಂಬರ್ ಮಟ್ಟದ ನಕ್ಷೆ:** ಕಸ್ತೂರಿರಂಗನ್ ವ್ಯಾಪ್ತಿಗೆ ಬರುವ 1476 ಗ್ರಾಮಗಳಲ್ಲಿ ಸರ್ವೆ ನಂಬರ್ ಮಟ್ಟದ ಇಎಸ್‌ಎ ನಕ್ಷೆ ಸಿದ್ಧಪಡಿಸಬೇಕು. ಅದನ್ನು ಕನ್ನಡದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.

**ಎನ್‌ಜಿಟಿಯಿಂದ ಒಂದು ವರ್ಷ ಕಾಲಾವಕಾಶ ಪಡೆಯಿರಿ:** ಅಕ್ಟೋಬರ್ 25ರ ಗಡುವಿನೊಳಗೆ ಇಷ್ಟೊಂದು ದೊಡ್ಡ ಪ್ರಮಾಣದ ಸಮೀಕ್ಷೆ ಮತ್ತು ದಾಖಲೆ ಸಿದ್ಧಪಡಿಸುವುದು ಸಾಧ್ಯವಿಲ್ಲ. ಹೀಗಾಗಿ ಎನ್‌ಜಿಟಿ ಮುಂದೆ ಸಮರ್ಥ ಕಾನೂನು ತಂಡವನ್ನು ನಿಯೋಜಿಸಿ ಕನಿಷ್ಠ ಒಂದು ವರ್ಷದ ಕಾಲಾವಕಾಶ ಪಡೆಯಬೇಕು ಎಂದು ರಾಜ್ಯ ಸರಕಾರಕ್ಕೆ ವಿಜಯೇಂದ್ರ ಸಲಹೆ ನೀಡಿದರು.

**ಬಗರ್‌ಹುಕುಂ, 94ಎ ಅರ್ಜಿಗಳಿಗೆ ಕಾಲಮಿತಿ:** ಕಾಡಂಚಿನ ಜನರ ಆತಂಕ ನಿವಾರಿಸಲು ಬಗರ್‌ಹುಕುಂ ಹಾಗೂ ಸೆಕ್ಷನ್ 94ಎ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಿ ಕಾಲಮಿತಿಯಲ್ಲಿ ವಿಲೇವಾರಿ ಮಾಡಬೇಕು. ಅರಣ್ಯ ಮತ್ತು ಕಂದಾಯ ಗಡಿ ವಿವಾದಗಳಿಗೆ ಪ್ರತ್ಯೇಕ ಟಾಸ್ಕ್‌ಫೋರ್ಸ್ ರಚಿಸಬೇಕು ಎಂದು ಆಗ್ರಹಿಸಿದರು.

**ಅರಣ್ಯ ಅಧಿಕಾರಿಗಳಿಗೂ 'ನಟ್ಟು-ಬೋಲ್ಟ್ ಟೈಟ್' ಮಾಡಿ**

ಕಾಡಂಚಿನ ಜನರಿಗೆ ಅರಣ್ಯ ಅಧಿಕಾರಿಗಳಿಂದ ಅನಗತ್ಯ ತೊಂದರೆ ಆಗುತ್ತಿದೆ ಎಂಬ ಆರೋಪಗಳನ್ನೂ ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ವಿಜಯೇಂದ್ರ ಹೇಳಿದರು.

**'ಪಾದಯಾತ್ರೆ' ರಾಜಕೀಯದಿಂದ ಜನರ ಆತಂಕ ಹೆಚ್ಚಿಸಬೇಡಿ:** ಸರಕಾರ ಒಂದೆಡೆ ಕಸ್ತೂರಿರಂಗನ್ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ ಎನ್ನುತ್ತದೆ. ಮತ್ತೊಂದೆಡೆ ಆಡಳಿತ ಪಕ್ಷದ ಶಾಸಕರು, ಸಚಿವರು ಜನರೊಂದಿಗೆ ಪಾದಯಾತ್ರೆ ನಡೆಸುತ್ತಿರುವುದು ಯಾವ ಸಂದೇಶ ನೀಡುತ್ತದೆ ಎಂದು ವಿಜಯೇಂದ್ರ ಪ್ರಶ್ನಿಸಿದರು. ಕೊನೆಗೆ, "ಪಶ್ಚಿಮಘಟ್ಟವೂ ಉಳಿಯಬೇಕು. ಕಾಡಂಚಿನ ಗ್ರಾಮಗಳೂ ಉಳಿಯಬೇಕು. ಅಭಿವೃದ್ಧಿಯೂ ಆಗಬೇಕು. ನಿರ್ಣಯ ಅಂಗೀಕರಿಸಿ ಕೈತೊಳೆದುಕೊಳ್ಳದೆ, ರಾಜ್ಯ ಸರಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕು" ಎಂದು ವಿಜಯೇಂದ್ರ ಆಗ್ರಹಿಸಿದರು.

# 'ದಪ್ಪ ಚರ್ಮದ ಸರ್ಕಾರದ ಚಳಿ ಬಿಡಿಸುತ್ತೇವೆ'

● ವಿಕ್ರಮ ವಾಹಿನಿ । ಬೆಂಗಳೂರು

ಇದು ದಪ್ಪ ಚರ್ಮದ ಸರ್ಕಾರ. ಈ ಸರ್ಕಾರಕ್ಕೆ ಚಳಿ ಬಿಡಿಸುವ ಮತ್ತು ಕಿವಿ ಹಿಂಡುವ ಕೆಲಸವನ್ನು ಸದನದಲ್ಲಿ ಮಾಡೇ ಮಾಡುತ್ತೇವೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಹೇಳಿದ್ದಾರೆ.

ನಗರದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಇವರು, ಕಳೆದ ಬಾರಿ ನಾವು ವಿಧಾನಸಭೆ ಕಲಾಪದಲ್ಲಿ ಈ ಸರ್ಕಾರಕ್ಕೆ ಚಳಿ ಬಿಡಿಸಿದ್ದೆವು. ನಮ್ಮ ಹೋರಾಟದಿಂದ ಒಂದು ವಿಕೆಟ್ ಬಿದ್ದು ಹೋಯಿತು. ಈ ಬಾರಿಯೂ ವಿರೋಧ ಪಕ್ಷವಾಗಿ ನಮ್ಮ ಕೆಲಸವನ್ನು ಸಮರ್ಥವಾಗಿ ಮಾಡುತ್ತೇವೆ ಎಂದು ಹೇಳಿದರು .

ಈ ಸರ್ಕಾರ ವಿಶೇಷ ಅಧಿವೇಶನವನ್ನು ಬೇಗ ಮುಗಿಸುವ ಸನ್ನಾಹದಲ್ಲಿದೆ. ರಾಜ್ಯದಲ್ಲಿನ ಬರಪರಿಸ್ಥಿತಿ ಬಗ್ಗೆ ಚರ್ಚೆಗೆ ಎರಡು ದಿನ ಹೆಚ್ಚುವರಿಯಾಗಿ ಮೀಡಲಿಡಿ ಎಂದು ಕೇಳಿದ್ದೇವೆ. ಸರ್ಕಾರ ಏನು ಮಾಡುವುದೋ ನೋಡಬೇಕು.



ಬರಸಂಬಂಧ ಸರ್ಕಾರ ಈಗ ಎಚ್ಚೆತ್ತುಕೊಂಡಿದೆ. ನಾಲ್ಕು ತಿಂಗಳು ಮೊದಲೇ ಎಚ್ಚರವಾಗಬೇಕಿತ್ತು. ಇದು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತಾಗಿದೆ. ಸರ್ಕಾರ ಬರವನ್ನು ನಿರ್ಲಕ್ಷ್ಯ ಮಾಡಿದ್ದರಿಂದ ರಾಜ್ಯದಲ್ಲಿ 2800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಾಲಬಾಧೆ ತಾಳದೆ ನಿನ್ನೆ ಚಾಮರಾಜ ನಗರದಲ್ಲಿ ರೈತರೊಬ್ಬರು ಹೊಲದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎಲ್ಲವನ್ನು ಸದನದಲ್ಲಿ ಪ್ರಮುಖವಾಗಿ ಚರ್ಚೆಗೆ ಎಳೆಯುತ್ತೇವೆ ಎಂದು ಹೇಳಿದರು.

ಬಿಜೆಪಿ, ಕಸ್ತೂರಿರಂಗನ್ ವರದಿಗೆ ವಿರೋಧ ಮಾಡಿದೆ. ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರು ಇದ್ದಾಗಲೂ ವಿರೋಧ ಮಾಡಿದ್ದೆವು. ನಮಗೆ ಜನರ ಭಾವನೆ ಮುಖ್ಯ, ಬದುಕು ಮುಖ್ಯ. ಎನ್‌ಡಿಎ ಮೈತ್ರಿ ಪಕ್ಷವಾಗಿರುವ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಸೇರಿ ನಾವು ಕಸ್ತೂರಿರಂಗನ್ ವರದಿ ವಿರೋಧಿಸಿದ್ದೇವೆ. ಬರ ಮತ್ತು ಕಸ್ತೂರಿರಂಗನ್ ವರದಿ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆ ಮಾಡ್ತೇವೆ. ಜನರ ಪರವಾಗಿ ನಾವು ಧ್ವನಿ ಎತ್ತುತ್ತೇವೆ ಎಂದು ತಿಳಿಸಿದರು.

ರೈತರ ವಿಚಾರ, ಕೆಪಿಎಸ್‌ಸಿ ಹಗರಣ, ಬಿಡದಿ ಟೌನ್‌ಶಿಪ್ ವಿಚಾರ ಬಾರದಂತೆ ನೋಡಿಕೊಳ್ಳಲು ಸರ್ಕಾರ ಮುಂದಾಗಿದೆ. ಇವನ್ನೆಲ್ಲ ಮುಚ್ಚಿಹಾಕಲು ವಿಶೇಷ ಅಂತ ನೆಪಮಾಡಿ ಅಧಿವೇಶನ ಕರೆದಿದ್ದಾರೆ. ವಿಶೇಷ ಅಧಿವೇಶನ ಕರೆದಾಗ ಮಾನ್ಯ ರಾಜ್ಯಪಾಲರು ಅನುಮೋದಿಸಬೇಕು. ಇವೆಲ್ಲ ನಿಯಮಗಳನ್ನು ಡಿ.ಕೆ.ಶಿವಕುಮಾರ್ ಅವರೇ ತಮ್ಮ ಪುಸ್ತಕದಲ್ಲಿ ಸೃಷ್ಟಿಸಿಕೊಂಡಿದ್ದಾರೆ. ಬೇರೆ ವಿಚಾರವೆಲ್ಲಾದರೂ ಕಲಾಪದಲ್ಲಿ ಚರ್ಚೆಯಾದರೆ ಸರ್ಕಾರಕ್ಕೆ ಇರುಸುಮರಿಸು ಆಗಿ ಇನ್ನೊಂದು ವಿಕೆಟ್ ಬೀಳುತ್ತೆ ಅಂತ ಭಯ ಆಗಿದೆ. ನಾವೀಗ ಈಗಾಗಲೇ ನಿಲುವಳಿ ಸೂಚನೆ ಸಲ್ಲಿಸಿದ್ದೇವೆ ಎಂದು ವಿವರಿಸಿದರು.

# ಶ್ರೀ ಪುತ್ತಿಗೆ ಸಂಧ್ಯಾ ವಿದ್ಯಾಪೀಠ ಹಾಗೂ ಮಹಿಳಾ ವಿದ್ಯಾಪೀಠ ಉದ್ಘಾಟನೆ

● ವಿಕ್ರಮ ವಾಹಿನಿ । ನವಿ ಮುಂಬೈ

ಉಡುಪಿ ಶ್ರೀ ಪುತ್ತಿಗೆ ಮಠದ ಹಿರಿಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರ ದಿವ್ಯ ಉಪಸ್ಥಿತಿ ಹಾಗೂ ಆಶೀರ್ವಾದದೊಂದಿಗೆ ಮುಂಬೈ ಮಹಾನಗರದಲ್ಲಿ ಶ್ರೀ ಪುತ್ತಿಗೆ ಸಂಧ್ಯಾ ವಿದ್ಯಾಪೀಠ ಹಾಗೂ ಶ್ರೀ ಪುತ್ತಿಗೆ ಮಹಿಳಾ ವಿದ್ಯಾಪೀಠ ಇಂದು ವಿಧಿವತ್ತಾಗಿ ಉದ್ಘಾಟನೆಗೊಂಡಿತು.

ಯಾಂತ್ರಿಕ ಜೀವನಶೈಲಿಯ ಪರಿಣಾಮವಾಗಿ ಧರ್ಮ, ಸಂಸ್ಕೃತಿ ಹಾಗೂ ಮೌಲ್ಯಾಧಾರಿತ ಜೀವನ ಕ್ರಮಗಳು ನಿಧಾನವಾಗಿ ಮರೆಯಾಗುತ್ತಿರುವ ಹಿನ್ನೆಲೆಯಲ್ಲಿ, ಆಸ್ತಿಕ ಸಮಾಜದ ಪ್ರತಿಯೊಂದು ಮನೆ–ಮನದಲ್ಲೂ ಧರ್ಮಚಿಂತನೆ ಮೂಡಿಸಿ, ಧಾರ್ಮಿಕ ಆಚರಣೆಗಳ ಅರ್ಥವನ್ನು ಅರಿತು ಅವುಗಳನ್ನು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಶ್ರೀ ಪುತ್ತಿಗೆ ವಿದ್ಯಾಪೀಠವನ್ನು ಸ್ಥಾಪಿಸಲಾಗಿದೆ.

ಈಗಾಗಲೇ ಚೆನ್ನೈ, ಬೆಂಗಳೂರು ಹಾಗೂ ಕೋಲ್ಕತ್ತಾ ನಗರಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪುತ್ತಿಗೆ ವಿದ್ಯಾಪೀಠವು, ಮುಂಬೈ ಮಹಾನಗರದಲ್ಲಿಯೂ ಧರ್ಮ ಹಾಗೂ ಸಂಸ್ಕೃತಿಯ ಪ್ರಸಾರಕ್ಕಾಗಿ ತನ್ನ ಕಾರ್ಯವನ್ನು ವಿಸ್ತರಿಸಿದೆ. ಶ್ರೀ ಜಗನ್ನಾಥ ದಾಸರ ಆರಾಧನೆಯ ಪವಿತ್ರ ಸಂದರ್ಭದಲ್ಲಿ ಈ ವಿದ್ಯಾಪೀಠಗಳ ಆರಂಭಕ್ಕೆ ಸಂಕಲ್ಪ ಮಾಡಲಾಗಿದೆ.



ಶ್ರೀ ಪುತ್ತಿಗೆ ಮಹಿಳಾ ವಿದ್ಯಾಪೀಠದಲ್ಲಿ ಮಹಿಳೆಯರಿಗೆ ದಾಸರ ಪದಗಳು, ಹರಿಕಥಾಮೃತಸಾರ ಸಂಪ್ರದಾಯದ ಹಾಡುಗಳು, ಭಜನೆ, ರಂಗವಲ್ಲಿ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ತರಬೇತಿ ನೀಡಲಾಗುವುದು.

**ಸಂಧ್ಯಾ ವಿದ್ಯಾಪೀಠ:** ವಿಪ್ರ ಪುರುಷರಿಗಾಗಿ ಆರಂಭಿಸಲಾಗಿರುವ ಸಂಧ್ಯಾ ವಿದ್ಯಾಪೀಠದಲ್ಲಿ ವೇದಾಧ್ಯಯನ, ಸಂಧ್ಯಾವಂದನೆ ಕಾರ್ಯಾಗಾರ, ದೇವಪೂಜಾ ಪದ್ಧತಿ, ಶ್ರೀಮದ್ಭಗವದ್ಗೀತೆ, ದಾಸರ ಪದಗಳು, ಭಜನೆ ಮುಂತಾದ ವಿಷಯಗಳ ಕುರಿತು ಕ್ರಮಬದ್ಧವಾದ ಶಿಕ್ಷಣ ಮತ್ತು ತರಬೇತಿ ನೀಡಲಾಗುವುದು.

ಉದ್ಘಾಟನಾ ಸಮಾರಂಭದಲ್ಲಿ ಸಭೆಯನ್ನುದ್ದೇಶಿಸಿ ಆಶೀರ್ವಚನ ನೀಡಿದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರು,

"ಸನಾತನ ಧರ್ಮವು ಎಂದಿಗೂ ನಶಿಸುವುದಿಲ್ಲ. ಅದಕ್ಕೆ ಪ್ರಮುಖ ಕಾರಣ ಹಿಂದೂ ಸಮಾಜದ ಸ್ತ್ರೀಯರಲ್ಲಿರುವ ಧರ್ಮಪ್ರಜ್ಞೆ ಹಾಗೂ ಅಚಲವಾದ ಧರ್ಮನಿಷ್ಠೆ. ಈ ಧರ್ಮಪ್ರಜ್ಞೆಯನ್ನು ಮತ್ತಷ್ಟು ಜಾಗೃತಗೊಳಿಸುವ ಉದ್ದೇಶದಿಂದ ಮಹಿಳಾ ವಿದ್ಯಾಪೀಠವನ್ನು ಆರಂಭಿಸಲಾಗಿದೆ.

ಯಾಂತ್ರಿಕ ಜೀವನಶೈಲಿಯಲ್ಲಿ ತಮ್ಮತನವನ್ನೇ ಮರೆತು ಹೋಗುತ್ತಿರುವ ಪುರುಷರಲ್ಲಿ, ವಿಶೇಷವಾಗಿ ವಿಪ್ರ ಪುರುಷರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವ ಉದ್ದೇಶದಿಂದ ಸಂಧ್ಯಾ ವಿದ್ಯಾಪೀಠವನ್ನು ಸ್ಥಾಪಿಸಲಾಗಿದೆ. ವ್ಯವಸ್ಥಿತವಾಗಿ ನಡೆಯಲಿರುವ ಈ ವಿದ್ಯಾಪೀಠಗಳಲ್ಲಿ ಶಿಕ್ಷಣ ಪೂರ್ಣಗೊಳಿಸಿದವರಿಗೆ ಪ್ರಮಾಣಪತ್ರವನ್ನು ನೀಡಲಾಗುವುದು," ಎಂದು ನುಡಿದರು.

ಈ ಸಂದರ್ಭದಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯದ ಶ್ಲೋಕವನ್ನು ಉಪದೇಶಿಸುವ ಮೂಲಕ ಶ್ರೀಪಾದಂಗಳವರು ವಿದ್ಯಾಪೀಠಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ವಾನ್ ನಾಗರಹಳ್ಳಿ ಪ್ರಹ್ಲಾದಾಚಾರ್ಯರು ಮಾತನಾಡಿ,

"ಇಂತಹ ವಿದ್ಯಾಪೀಠಗಳು ಸಮಾಜಕ್ಕೆ ಆದರ್ಶಪ್ರಾಯವಾಗಿವೆ. ಲಕ್ಷಾಂತರ ಗುರುಕುಲಗಳು ಹಾಗೂ ವಿದ್ಯಾಪೀಠಗಳು ಇದ್ದಂತಹ ಈ ರಾಷ್ಟ್ರದಲ್ಲಿ ಇಂದು ಬೆರಳೆಣಿಕೆಯಷ್ಟು ಮಾತ್ರ ಉಳಿದಿವೆ. ಪರಮಪೂಜ್ಯ ಶ್ರೀಪಾದಂಗಳವರ ಸಂಕಲ್ಪದಿಂದ ನಮ್ಮ ದೇಶದ ಆ ಗತವೈಭವವು ಪುನಃಶ್ಚೇತನಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ," ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅತಿಥಿಗಳಾದ ಶ್ರೀ ಮಾನ್ಯೂರು ಅನಂತಮೂರ್ತಿ ಅವರು ಭಾಗ್ಯನಗರದ ಶ್ರೀ ಗುರು ರಾಘವೇಂದ್ರ ಮಠದಿಂದ ತಂದ ರಾಯರ ಶೇಷವಸ್ತ್ರವನ್ನು ಪರಮಪೂಜ್ಯ ಶ್ರೀಪಾದಂಗಳವರಿಗೆ ಸಮರ್ಪಿಸಿದರು.

ಧರ್ಮ, ಸಂಸ್ಕೃತಿ ಮತ್ತು ಮೌಲ್ಯಾಧಾರಿತ ಜೀವನಶೈಲಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮಹತ್ವದ ಉದ್ದೇಶದೊಂದಿಗೆ ಆರಂಭಗೊಂಡಿರುವ ಈ ವಿದ್ಯಾಪೀಠಗಳು ಮುಂಬೈ ಮಹಾನಗರದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ದಿಕ್ಕನ್ನು ನೀಡುವ ನಿರೀಕ್ಷೆಯಿದೆ.

# ಚಿತ್ರಸಂತೆ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

● ವಿಕ್ರಮ ವಾಹಿನಿ । ಬೆಂಗಳೂರು

ನಗರದ ಅರಮನೆ ಮೈದಾನದಲ್ಲಿ ನಡೆದ 'ಚಿತ್ರಸಂತೆ ಚಲನಚಿತ್ರ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಹಿರಿಯ ಹಾಗೂ ಯುವ ಕಲಾವಿದರು, ನಿರ್ದೇಶಕರು, ನಿರ್ಮಾಪಕರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗೌರವಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ 'ಕಾಂತಾರ' ಖ್ಯಾತಿಯ ನಿರ್ದೇಶಕ ಹಾಗೂ ನಟ ರಿಷಬ್ ಶೆಟ್ಟಿ, ನಟಿ ಹಾಗೂ ವಿಧಾನ ಪರಿಷತ್ ಉಪಸಭಾಪತಿ ಉಮಾಶ್ರೀ, ನಟ ವಿನೋದ್ ಪ್ರಭಾಕರ್ , ಚಿತ್ರಸಂತೆಯ ಗಿರೀಶ್ ಗೌಡ ಹಾಗೂ ಸ್ಮಾರ್ಟ್ ಕ್ವಿಕ್ ಮತ್ತು ನಿಯೋ ಫ್ರೆಶ್ ಸಂಸ್ಥಾಪಕ ದೀಪುಗೌಡ ಅವರ ಸಮ್ಮುಖದಲ್ಲಿ ಚಿತ್ರರಂಗದ ಸಾಧಕರಿಗೆ 'ಚಿತ್ರಸಂತೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಿರ್ದೇಶಕ ಸುಧೀರ್, ನಟಿ ಪ್ರಿಯಾಂಕಾ ಉಪೇಂದ್ರ, ನಿರ್ಮಾಪಕಿ ನಿವೇದಿತಾ ಶಿವಕುಮಾರ್ ಸೇರಿದಂತೆ ಹಲವು ಕಲಾವಿದರು ಹಾಗೂ ಚಿತ್ರರಂಗದ ಸಾಧಕರಿಗೆ 'ಚಿತ್ರಸಂತೆ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಿಷಬ್ ಶೆಟ್ಟಿ, ಕನ್ನಡ ಚಲನಚಿತ್ರಗಳು ಇಂದು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತಿವೆ. ಚಿತ್ರರಂಗದ ಬೆಳವಣಿಗೆಗೆ ಹೊಸ ನಿರ್ದೇಶಕರು ಹಾಗೂ ಕಲಾವಿದರಿಗೆ ಪ್ರೋತ್ಸಾಹ ಮತ್ತು ಸಹಕಾರ ದೊರೆಯಬೇಕು. ಉತ್ತಮ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಿದಾಗ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಂದು ಬೆಂಬಲಿಸುತ್ತಾರೆ. ಇಂತಹ ಪ್ರೋತ್ಸಾಹವೇ ಚಿತ್ರರಂಗವನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಸ್ಮಾರ್ಟ್ ಕ್ವಿಕ್ ಮತ್ತು ನಿಯೋ ಫ್ರೆಶ್ ಸಂಸ್ಥಾಪಕ ದೀಪುಗೌಡ ಮಾತನಾಡಿ, ಕಲೆ ಮತ್ತು ಕಲಾವಿದರು ಉಳಿಯಬೇಕು ಹಾಗೂ ಬೆಳೆಯಬೇಕು ಎಂಬ ಉದ್ದೇಶದಿಂದ ತಮ್ಮ ಸಂಸ್ಥೆಗಳ ಮೂಲಕ ಸಹಕಾರ ಮತ್ತು ಪ್ರೋತ್ಸಾಹ ನೀಡಲಾಗುತ್ತಿದೆ. ಹಿರಿಯ ಕಲಾವಿದರು ಹಾಗೂ ಸಂಕಷ್ಟದಲ್ಲಿರುವ ಕಲಾವಿದರಿಗೆ ಸಂಸ್ಥೆಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಹೊಸ ನಿರ್ದೇಶಕರು ಮತ್ತು ಕಲಾವಿದರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಚಲನಚಿತ್ರ ನಿರ್ಮಾಣ ಕ್ಷೇತ್ರಕ್ಕೂ ಪ್ರವೇಶಿಸಲು ಸಂಸ್ಥೆ ಸಿದ್ಧತೆ ನಡೆಸುತ್ತಿದೆ. ಮುಂದಿನ ದಿನಗಳಲ್ಲಿ ಚಿತ್ರರಂಗಕ್ಕೆ ಪ್ರವೇಶಿಸಿ, ತಮ್ಮದೇ ಆದ ಒಟಿಟಿ ವೇದಿಕೆಯನ್ನು ರೂಪಿಸುವ ಯೋಜನೆಯಿದೆ. ಅಭಿನಯ, ನಿರ್ದೇಶನ ಸೇರಿದಂತೆ ಚಿತ್ರರಂಗದ ಯಾವುದೇ ವಿಭಾಗದಲ್ಲಿ ಪ್ರತಿಭೆ ಹೊಂದಿರುವವರಿಗೆ ಈ ವೇದಿಕೆಯ ಮೂಲಕ ಅವಕಾಶ ಕಲ್ಪಿಸುವ ಉದ್ದೇಶವಿದೆ ಎಂದು ದೀಪುಗೌಡ ಹೇಳಿದರು.

ಚಿತ್ರ ಸಂತೆಯ ಗಿರೀಶ್ ಗೌಡರು ಚಲನಚಿತ್ರ ಮತ್ತು ಜನರ ನಡುವೆ ಅವಿನಾಭವ ಸಂಭಂದವಿದೆ. ಚಲನಚಿತ್ರದಲ್ಲಿರುವ ಉತ್ತಮ ಗುಣಗಳನ್ನು ಆಳವಡಿಸಿಕೊಳ್ಳುತ್ತಾರೆ. ಚಿತ್ರಸಂತೆ ಕಳೆದ 14ವರ್ಷಗಳಿಂದ ಕಲೆ, ಕಲಾವಿದರು, ನಟ, ನಟಿಯರನ್ನ ಗುರುತಿಸಿ ಕಾರ್ಯ ಮಾಡುತ್ತಿದೆ. ಮನೋರಂಜನಾ ಕಲೆಯಾಗಿರುವ ಚಿತ್ರದ್ಯೋದಮ ಇಂದು ಹಲವಾರು ಸಂಕಷ್ಟಗಳು ಎದುರಿಸುತ್ತಿದೆ. ಇದರ ನಡುವೆ ಕನ್ನಡ ಚಿತ್ರರಂಗ ನೂತನ ದಾಖಲೆ ಮಾಡುತ್ತಿರುವುದು ಸಂತೋಷದಾಯಕವಾದ ಸಂಗತಿಯಾಗಿದೆ ಎಂದು ಹೇಳಿದರು.

# 'ಹಿರಣ್ಯಾಕ್ಷ'ನ ಪಾಪದ ಕೊಡ ತುಂಬುತ್ತಿದೆ: ಹೆಚ್.ಡಿ. ಕುಮಾರಸ್ವಾಮಿ

● ವಿಕ್ರಮ ವಾಹಿನಿ । ನವದೆಹಲಿ

ಬಿಡದಿಯ ಬೈರಮಂಗಲದಲ್ಲಿ ಪ್ರತಿಭಟನೆ ನಡೆಸಲು ಮುಂದಾದ ರೈತರ ಮೇಲೆ ಅಮಾನುಷವಾಗಿ ದಬ್ಬಾಳಿಕೆ ನಡೆಸಿದ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು; 'ಹಿರಣ್ಯಾಕ್ಷ'ನ ಪಾಪದ ಕೊಡ ತುಂಬುತ್ತಿದೆ ಎಂದು ಗುಡುಗಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಸಚಿವರು; ಕರ್ನಾಟಕದಲ್ಲಿ ನಾಗರಿಕ ಸರಕಾರವಿದೆಯೋ ಅಥವಾ ರಾಕ್ಷಸ ಸರಕಾರ ಇದೆಯೋ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ತಮ್ಮ ಭೂಮಿ ಉಳಿಸಿಕೊಳ್ಳಲು ಬಿಡದಿಯ ರೈತರು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದರೆ, ಬಲಪ್ರಯೋಗದಿಂದ ಅವರನ್ನು ಹತ್ತಿಕ್ಕಲೆತ್ನಿಸಿದ ದುಷ್ಟಯತ್ನ ಖಂಡನಾರ್ಹ. ಬಿಡದಿಯ ಭೈರಮಂಗಲದಲ್ಲಿ ರೈತರ ಮೇಲೆ ಪೊಲೀಸರು ನಡೆಸಿರುವ ದಬ್ಬಾಳಿಕೆ 'ದೈವದ್ರೋಹ'ಕ್ಕೂ ಮೀರಿದ್ದು ಎಂದು ಸಚಿವರು ಕಿಡಿಕಾರಿದ್ದಾರೆ.

ಧರಣಿ ಕೂರಲು ಪೆಂಡಾಲ್ ಹಾಕಲೆತ್ನಿಸಿದಾಗ ಅದನ್ನು ಕಿತ್ತುಕೊಂಡು ಅನ್ನದಾತರನ್ನು ಉರಿಬಿಸಿಲಿನಲ್ಲೇ ಕೂರಿಸಿದ ಪೊಲೀಸರ ವರ್ತನೆ ಅಕ್ಷಮ್ಯ. ಇಂತಹ ಕೃತ್ಯಗಳನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಬಿಡದಿ ಭೂಮಿ 'ರಿಯಲ್ ಎಸ್ಟೇಟ್ ವ್ಯಾಪಾರಿ' ಕಪಿಮುಷ್ಟಿಗೆ ಸಿಲುಕಿದೆ. ನೆನಪಿರಲಿ, 'ಹಿರಣ್ಯಾಕ್ಷ'ನ ಪಾಪದ ಕೊಡ ತುಂಬುತ್ತಿದೆ ಇಂದು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಅಧಿವೇಶನ ಒಂದು ವಾರ ವಿಸ್ತರಿಸಿ: ಬಿ.ವೈ. ವಿಜಯೇಂದ್ರ

● ವಿಕ್ರಮ ವಾಹಿನಿ । ಬೆಂಗಳೂರು

**ಬರ, ರೈತರ ಸಂಕಷ್ಟ, ಕಸ್ತೂರಿರಂಗನ್ ವರದಿ ಸೇರಿದಂತೆ ರಾಜ್ಯದ ಗಂಭೀರ ಸಮಸ್ಯೆಗಳ ಕುರಿತು ಸಮಗ್ರ ಚರ್ಚೆಗೆ ಮೂರು ದಿನಗಳ ವಿಶೇಷ ಅಧಿವೇಶನ ಸಾಲದು. ಕನಿಷ್ಠ ಒಂದು ವಾರಕ್ಕೆ ವಿಸ್ತರಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.**

ರಾಜ್ಯದ ವಿವಿಧ ಗಂಭೀರ ಸಮಸ್ಯೆಗಳು ಹಾಗೂ ಸಂಕಷ್ಟಗಳ ಕುರಿತು ಸಮಗ್ರವಾಗಿ ಚರ್ಚಿಸಲು ಕೇವಲ ಮೂರು ದಿನಗಳ ವಿಶೇಷ ಅಧಿವೇಶನ ಸಾಕಾಗುವುದಿಲ್ಲ. ಆದ್ದರಿಂದ ವಿಶೇಷ ಅಧಿವೇಶನವನ್ನು ಕನಿಷ್ಠ ಒಂದು ವಾರಕ್ಕೆ ವಿಸ್ತರಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಸ್ತೂರಿರಂಗನ್ ವರದಿ, ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲ, ಸಂಕಷ್ಟದಲ್ಲಿರುವ ರೈತರು ಸೇರಿದಂತೆ ಹಲವು ಪ್ರಮುಖ ವಿಚಾರಗಳ ಕುರಿತು ಚರ್ಚಿಸಲು ಸರ್ಕಾರ ಮೂರು ದಿನಗಳ ವಿಶೇಷ ಅಧಿವೇಶನ ಕರೆದಿದೆ. ಆದರೆ ಈ ಎಲ್ಲ ಗಂಭೀರ ವಿಚಾರಗಳಿಗೆ ಸಮಗ್ರ ಚರ್ಚೆ ನಡೆಸಲು ಮೂರು ದಿನಗಳು ಸಾಕಾಗುವುದಿಲ್ಲ. ಹೀಗಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರು, ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಸೇರಿದಂತೆ ನಾವು ಕನಿಷ್ಠ ಒಂದು ವಾರ ಅಧಿವೇಶನ ನಡೆಸಬೇಕೆಂದು ಆಗ್ರಹಿಸಿದ್ದೇವೆ ಎಂದರು.

ಇತ್ತೀಚೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಿಜೆಪಿಯವರು ಜನರ ಭಾವನೆಗಳ ಮೇಲೆ ಆಡಳಿತ ನಡೆಸುತ್ತಾರೆ ಹಾಗೂ ಕಾಂಗ್ರೆಸ್ ಜನರ ಬದುಕನ್ನು ಕಟ್ಟಿಕೊಡುವ ಕೆಲಸ ಮಾಡುತ್ತದೆ ಎಂಬರ್ಥದಲ್ಲಿ ಮಾತನಾಡಿದ್ದರು. ಆದರೆ ಕಳೆದ ಮೂರು ಕಾಲು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ನಿಜವಾಗಿಯೂ ಜನರ ಬದುಕನ್ನು ಕಟ್ಟಿಕೊಡುವ ಕೆಲಸ ಮಾಡಿದೆಯೇ ಅಥವಾ ಜನರ ಬದುಕಿನೊಂದಿಗೆ ಚೆಲ್ಲಾಟವಾಡಿದೆಯೇ ಎಂಬುದನ್ನೂ ಈ ಅಧಿವೇಶನದಲ್ಲಿ ಚರ್ಚಿಸಬೇಕಿದೆ ಎಂದು ಹೇಳಿದರು.

ಬಿಜೆಪಿ ಹಮಿಕೊಂಡಿದ್ದ 10 ದಿನಗಳ ಬಳ್ಳಾರಿ ಚಲೋ ಪಾದಯಾತ್ರೆ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ. ಈ ಹೋರಾಟದಿಂದ ರಾಜ್ಯ ಸರ್ಕಾರದ ಮೇಲೆ ಒತ್ತಡ ನಿರ್ಮಾಣವಾಗಿದೆ. ಸರ್ಕಾರದ ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಬಳ್ಳಾರಿ ಚಲೋ ಹೋರಾಟದಿಂದ ಮುಖ್ಯಮಂತ್ರಿಗಳು ವಿಚಲಿತರಾದಂತೆ ಕಾಣುತ್ತಿದೆ ಎಂದು ಹೇಳಿದರು.

ಬಿಜೆಪಿ ನಡೆಸಿದ ನಿರಂತರ ಹೋರಾಟದ ಒತ್ತಡಕ್ಕೆ ಮಣಿದು ಸರ್ಕಾರ ವಿಶೇಷ ಅಧಿವೇಶನ ಕರೆಯುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದ ರೈತರು ಎದುರಿಸುತ್ತಿರುವ ಬರಗಾಲದ ಸಂಕಷ್ಟ, ಬೆಳೆ ನಷ್ಟ, ರೈತರ ಸಮಸ್ಯೆಗಳು ಸೇರಿದಂತೆ ಅವರ ಬದುಕಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸಲಾಗುವುದು ಎಂದರು.

ಅರಣ್ಯ ಸಂರಕ್ಷಣೆ ಮತ್ತು ಜನರ ಬದುಕು? ಇವೆರಡನ್ನೂ ಸಮತೋಲನದಿಂದ ಕಾಪಾಡುವ ರೀತಿಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ಎಲ್ಲ ವಿಚಾರಗಳ ಕುರಿತು ವಿಶೇಷ ಅಧಿವೇಶನದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸಮಗ್ರವಾಗಿ ಚರ್ಚೆ ನಡೆಸಲಿದ್ದಾರೆ ಎಂದು ಬಿ.ವೈ. ವಿಜಯೇಂದ್ರ ತಿಳಿಸಿದರು.

# ನಕಲಿ ಔಷಧಜಾಲ: ಹಲವು ಸಂಸ್ಥೆಗಳ ಲೈಸೆನ್ಸ್ ರದ್ದು

● ವಿಕ್ರಮ ವಾಹಿನಿ । ಬೆಂಗಳೂರು

ಕಡಿಮೆ ಬೆಲೆಯ ಔಷಧಿಗಳಿಗೆ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳ ಹೆಸರಿನ ನಕಲಿ ಲೇಬಲ್ ಅಂಟಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದ ನಕಲಿ ಔಷಧಿ ಜಾಲವನ್ನು ಆಹಾರ ಮತ್ತು ಔಷಧ ಆಡಳಿತ ಇಲಾಖೆ ಪತ್ತೆಹಚ್ಚಿದೆ. ಬಿಡದಿ ವ್ಯಾಪ್ತಿಯಲ್ಲಿ ನಡೆದ ದಾಳಿ ವೇಳೆ ಪತ್ತೆಯಾದ ಈ ಪ್ರಕರಣದಲ್ಲಿ ಈಗಾಗಲೇ 16 ಔಷಧ ಪರವಾನಗಿಗಳನ್ನು ರದ್ದುಪಡಿಸಿ, 8 ಪರವಾನಗಿಗಳನ್ನು ಅಮಾನತು ಗೊಳಿಸಲಾಗಿದೆ.

ಆಗಸ್ಟ್ 18ರಂದು ಖಚಿತ ಮಾಹಿತಿ ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದ್ದು, ಯಾವುದೇ ಸರ್ಕಾರಿ ಪರವಾನಗಿ ಪಡೆಯದೆ ಔಷಧಿಗಳನ್ನು ಮರು–ಪ್ಯಾಕಿಂಗ್, ಲೇಬಲಿಂಗ್, ದಾಸ್ತಾನು ಹಾಗೂ ವಿತರಣೆ ಮಾಡುತ್ತಿದ್ದ ಜಾಲ ಬೆಳಕಿಗೆ ಬಂದಿದೆ. ದಾಳಿ ವೇಳೆ ಒಟ್ಟು 5.05 ಕೋಟಿ ಮೌಲ್ಯದ ಔಷಧಿಗಳು ಹಾಗೂ ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಕಡಿಮೆ ಬೆಲೆಯ ಔಷಧಿ, ದುಬಾರಿ ಬ್ರಾಂಡ್ ಹೆಸರಿನಲ್ಲಿ ಮಾರಾಟ:** ಪ್ರಾಥಮಿಕ ತನಿಖೆಯಲ್ಲಿ ಆರೋಪಿಗಳು ಬೇರೆ ರಾಜ್ಯಗಳಿಂದ ಅತ್ಯಂತ ಕಡಿಮೆ ಬೆಲೆಗೆ ಔಷಧಿಗಳನ್ನು ತರಿಸಿಕೊಂಡು, ಅವುಗಳನ್ನು ಹೊಸ ಬಾಟಲಿಗಳಿಗೆ ತುಂಬುತ್ತಿದ್ದರು ಎನ್ನಲಾಗಿದೆ. ಬಳಿಕ ಫೈಜರ್ ಸೇರಿದಂತೆ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳ ಹೆಸರಿನಲ್ಲಿ ನಕಲಿ ಲೇಬಲ್‌ಗಳು ಮತ್ತು ಸ್ಟ್ಯಾಂಪ್‌ಗಳನ್ನು ಅಂಟಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಕೆಲವು ಔಷಧಿಗಳ ಲೇಬಲ್ ಮೇಲಿದ್ದ ಕ್ಯೂಆರ್ ಹಾಗೂ ಸ್ಕ್ಯಾನಿಂಗ್ ಕೋಡ್‌ಗಳು ನಿಷ್ಕ್ರಿಯವಾಗಿರುವುದು ಕೂಡ ಅಧಿಕಾರಿಗಳ ಗಮನಕ್ಕೆ ಬಂದಿದೆ.

**ಬ್ಯಾಚ್‌ಗಳಿಗೆ ಬ್ರೇಕ್:** ವಶಪಡಿಸಿಕೊಂಡ ಔಷಧಿಗಳ ಯಾವುದೇ ಬ್ಯಾಚ್ ಮಾರುಕಟ್ಟೆಯಲ್ಲಿ ಮತ್ತೆ ಮಾರಾಟ ಅಥವಾ ವಿತರಣೆಯಾಗದಂತೆ ಈಆಂ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಪತ್ತೆಯಾದ ಔಷಧಿಗಳ ಬ್ಯಾಚ್ ಸಂಖ್ಯೆಗಳನ್ನು ತಕ್ಷಣವೇ ಬ್ಲಾಕ್ ಮಾಡಲಾಗಿದೆ.

ಅಲ್ಲದೆ, ವಶಪಡಿಸಿಕೊಂಡ ಔಷಧಿಗಳ ಮಾದರಿಗಳನ್ನು ಗುಣಮಟ್ಟ ಹಾಗೂ ಔಷಧೀಯ ಅಂಶಗಳ ಪರಿಶೀಲನೆಗಾಗಿ ಸರ್ಕಾರಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪ್ರಯೋಗಾಲಯದ ವರದಿ ಬಂದ ಬಳಿಕ ಪ್ರಕರಣದ ತನಿಖೆಗೆ ಮತ್ತಷ್ಟು ಸ್ಪಷ್ಟತೆ ದೊರೆಯಲಿದೆ.

**ಚಿಲ್ಲರೆ, ಸಗಟು ಮಳಿಗೆಗಳಿಗೂ ಬಿಸಿ:** ನಕಲಿ ಔಷಧಿಗಳ ಮಾರಾಟ ಹಾಗೂ ಸರಬರಾಜಿನಲ್ಲಿ ಭಾಗಿಯಾಗಿರುವ ಶಂಕೆಯಿರುವ ಚಿಲ್ಲರೆ ಮತ್ತು ಸಗಟು ಔಷಧ ಮಳಿಗೆಗಳ ಮೇಲೂ ಇಲಾಖೆ ಕ್ರಮ ಕೈಗೊಳ್ಳುತ್ತಿದೆ. ಈಗಾಗಲೇ ಔಷಧಿಗಳ ಮಾರಾಟ ಅಥವಾ ಸರಬರಾಜು ಮಾಡಿರುವ ಮಳಿಗೆಗಳ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.


**ಕಾನೂನು ಕ್ರಮ:** ನಕಲಿ ಔಷಧಿ ಜಾಲದ ವಿರುದ್ಧ ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮಕ್ಕೆ ಈಆಂ ಮುಂದಾಗಿದೆ. ಇಂತಹ ಗಂಭೀರ ಪ್ರಕರಣಗಳಲ್ಲಿ ಆರೋಪ ಸಾಬೀತಾದರೆ ಕಠಿಣ ಜೈಲು ಶಿಕ್ಷೆ ಮತ್ತು ದಂಡಕ್ಕೆ ಕಾನೂನಿನಲ್ಲಿ ಅವಕಾಶವಿದೆ.

ಪ್ರಕರಣದ ಸಂಪೂರ್ಣ ಜಾಲ, ಔಷಧಿಗಳ ಮೂಲ, ಸರಬರಾಜು ವ್ಯವಸ್ಥೆ ಹಾಗೂ ಮಾರುಕಟ್ಟೆಯಲ್ಲಿ ವಿತರಣೆಗೊಂಡ ಪ್ರಮಾಣದ ಕುರಿತು ಖುಖಿ ತನಿಖೆ ಮುಂದುವರಿಸಿದೆ.

# ಮೋದಿ ಅಪಹಾಸ್ಯ: ರಾಹುಲ್ ಗಾಂಧಿ ನಡೆಗೆ ಎನ್. ರವಿಕುಮಾರ್ ಖಂಡನೆ

● ವಿಕ್ರಮ ವಾಹಿನಿ । ಬೆಂಗಳೂರು

ಇಂದೋರ್‌ನಲ್ಲಿ ನಡೆದ 'ಛಾತ್ರೋಂ ಕಿ ಗೂಂಜ್' ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವ್ಯಕ್ತಿತ್ವ, ವಿದೇಶಾಂಗ ನೀತಿ ಹಾಗೂ ಅವರ ದಿವಂಗತ ತಾಯಿಯವರನ್ನು ಅಪಹಾಸ್ಯ ಮಾಡಿರುವುದನ್ನು ಕಂಡೂ ವೇದಿಕೆಯಲ್ಲಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನಕ್ಕು ಪ್ರೋತ್ಸಾಹಿಸಿರುವುದು ಖಂಡನೀಯ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದ್ದಾರೆ.



ರಾಹುಲ್ ಗಾಂಧಿಯವರಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವ ನಾಯಕರು ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ ವೈಯಕ್ತಿಕ ಟೀಕೆಗಳಿಗೆ ಅವಕಾಶ ನೀಡಿರುವುದು ಕಾಂಗ್ರೆಸ್‌ನ ರಾಜಕೀಯ ನಡವಳಿಕೆಯನ್ನು ಪ್ರಶ್ನಿಸುವಂತಾಗಿದೆ ಎಂದು ರವಿಕುಮಾರ್ ಆರೋಪಿಸಿ ದ್ದಾರೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಹಜವಾದರೂ, ನಿಧನರಾದ ತಾಯಿಯನ್ನು ರಾಜಕೀಯ ಚರ್ಚೆಗೆ ಎಳೆದು ತಂದು ಅಪಹಾಸ್ಯ ಮಾಡುವುದು ಭಾರತೀಯ ಸಂಸ್ಕೃತಿಗೆ ವಿರುದ್ಧವಾಗಿದೆ. ಪ್ರಧಾನಿಯವರ ವಿದೇಶಾಂಗ ನೀತಿ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಹಾಸ್ಯದ ವಸ್ತುವನ್ನಾಗಿಸುವ ಮೂಲಕ ದೇಶದ ಗೌರವಕ್ಕೂ ಧಕ್ಕೆ ತರಲಾಗಿದೆ ಎಂದು ಅವರು ಹೇಳಿದ್ದಾರೆ.

ಅಭಿವೃದ್ಧಿ, ಯುವಜನರ ಸಮಸ್ಯೆಗಳು ಹಾಗೂ ದೇಶದ ಭವಿಷ್ಯದ ಕುರಿತು ವಿಚಾರಾಧಾರಿತ ಚರ್ಚೆ ನಡೆಸುವ ಬದಲು ವೈಯಕ್ತಿಕ ಟೀಕೆ ಮತ್ತು ಅಪಹಾಸ್ಯಕ್ಕೆ ಕಾಂಗ್ರೆಸ್ ಮುಂದಾಗುತ್ತಿದೆ ಎಂದು ರವಿಕುಮಾರ್ ಟೀಕಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷ ದೇಶದ ಜನತೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಬೇಷರತ್ ಕ್ಷಮೆಯಾಚಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಆರೋಗ್ಯಕರ ಪ್ರಜಾಸತ್ತಾತ್ಮಕ ಚರ್ಚೆಯ ಮೂಲಕ ವ್ಯಕ್ತಪಡಿಸಬೇಕು; ವೈಯಕ್ತಿಕ ನಿಂದನೆಗೆ ಅವಕಾಶ ನೀಡಬಾರದು ಎಂದು ಅವರು ಹೇಳಿದ್ದಾರೆ.

# ರಾಜೀನಾಮೆ ನಿರ್ಧಾರ ಬೇಡ: ಎಚ್.ಕೆ.ಪಾಟೀಲರಿಗೆ ಗೂಳಿಗೌಡ ಮನವಿ

● ವಿಕ್ರಮ ವಾಹಿನಿ । ಬೆಂಗಳೂರು

ಕರ್ನಾಟಕದ ಬರ ಪರಿಸ್ಥಿತಿ ನಿರ್ವಹಣೆಗೆ ಕೇಂದ್ರ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರ ಕ್ರಮಕೈಗೊಳ್ಳಲಿದೆ. ತಾವು ಸರ್ಕಾರದ ಮಾರ್ಗದರ್ಶಕರಾಗಬೇಕೇ ಹೊರತು ರಾಜೀನಾಮೆ ಅಂತಹ ನಿರ್ಧಾರ ಪ್ರಕಟಿಸಬಾರದು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಶಾಸಕರಾದ ದಿನೇಶ್ ಗೂಳಿಗೌಡ ಅವರು ಮಾಜಿ ಸಚಿವರು ಹಾಗೂ ಗದಗ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಕೆ.ಪಾಟೀಲರಿಗೆ ಮನವಿ ಮಾಡಿದ್ದಾರೆ.



ಈ ಕುರಿತು ಮನವಿ ಪತ್ರ ಬರೆದಿರುವ ಅವರು, ಗದಗ ಸೇರಿದಂತೆ ಬರದ ಪರಿಸ್ಥಿತಿ ಎದುರಿಸುತ್ತಿರುವ ಯಾವುದೇ ಪ್ರದೇಶಕ್ಕೆ ಅನ್ಯಾಯವಾಗದಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ಬರಪೀಡಿತ ತಾಲೂಕುಗಳ ಪಟ್ಟಿಯನ್ನು ಹಂತ ಹಂತವಾಗಿ ಪರಿಷ್ಕರಿಸಲಾಗುತ್ತಿದ್ದು, ಉಳಿದ ತಾಲೂಕುಗಳನ್ನೂ ಪರಿಶೀಲಿಸಲಾಗುತ್ತಿದೆ. ಎಚ್.ಕೆ. ಪಾಟೀಲ್ ಅವರು ಪಕ್ಷದ ಹಿರಿಯ ನಾಯಕರು. ರಾಜಕೀಯ ಜೀವನದಲ್ಲಿ ಅಪಾರ ಅನುಭವ ಹೊಂದಿರುವ ನೀವು ರಾಜೀನಾಮೆ ಅಂತಹ ನಿರ್ಧಾರ ಪ್ರಕಟಿಸುವುದು ತರವಲ್ಲ. ಗದಗ ರೈತರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ. ರೈತರ ಹಿತವೇ ಸರ್ಕಾರದ ಮೊದಲ ಆದ್ಯತೆ. ಗದಗ ತಾಲೂಕಿನಲ್ಲಿ ಬರ ಪರಿಸ್ಥಿತಿ ಕುರಿತು ಈಗಾಗಲೇ ಅಧಿಕಾರಿಗಳು ವರದಿ ನೀಡಿದ್ದಾರೆ ಎಂದು ದಿನೇಶ್ ಗೂಳಿಗೌಡ ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯಕ್ಕೆ ಈಗ ಸಂಕಷ್ಟದ ಸಮಯ. ಈ ಸಮಯದಲ್ಲಿ ನಾವೆಲ್ಲರೂ ರೈತರ ಜೊತೆ ನಿಲ್ಲಬೇಕು. ಅದಕ್ಕಿಂತ ಮೊದಲು ಸರ್ಕಾರದ ಬೆನ್ನೆಲುಬಾಗಬೇಕು. ಆಗ ಮಾತ್ರ ರೈತರಿಗೆ ಪರಿಹಾರ ಸಿಗಲು ಸಾಧ್ಯ.

ಸಾಮಾನ್ಯ ಮಳೆ ಪ್ರಮಾಣ ಹಾಗೂ ಸುರಿದ ಮಳೆಯ ನಡುವಿನ ವ್ಯತ್ಯಾಸ ಮತ್ತು ಶೇಕಡಾವಾರು ಮಳೆ ಕೊರತೆ ಇದೆ. ಸತತವಾಗಿ ಮಳೆಯಿಲ್ಲದೆ ಒಣ ಹವೆಯು ಮುಂದುವರಿದ ದಿನಗಳ ಅವಧಿಯಾಗಿದೆ.

ಮಳೆ ಇಲ್ಲದಿರುವ ಸಮಯ ಹಾಗೂ ಹವಾಮಾನ ವೈಪರೀತ್ಯದಿಂದ ಮಳೆ ಕೊರತೆಯ ಅವಧಿ ಮತ್ತು ತೀವ್ರತೆ ಉಂಟಾಗಿದೆ. ಬಿತ್ತನೆಯಾಗಿರುವ ಕ್ಷೇತ್ರದ ಇಳುವರಿ ಹಾಗೂ ಬೆಳೆಗಳ ಮೇಲಾಗುವ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ಇದರಲ್ಲಿ ಗದಗ ಜಿಲ್ಲೆಯನ್ನು ಕೈಬಿಡಬೇಕು, ಮಂಡ್ಯ ಜಿಲ್ಲೆಯನ್ನು ಸೇರಿಸಬೇಕು ಅಥವಾ ಇನ್ನೊಂದು ಜಿಲ್ಲೆಯನ್ನು ಹೊರಗಿಡಬೇಕು ಎಂಬ ತಾರತಮ್ಯ ಇರುವುದಿಲ್ಲ. ಎಸ್.ಡಿ.ಆರ್.ಎಫ್. ಮತ್ತು ಎನ್.ಡಿ.ಆರ್.ಎಫ್ ನಿಯಮಾವಳಿಗಳನ್ವಯ ರಾಜ್ಯದ ಬರ ಪರಿಸ್ಥಿತಿಯನ್ನು ಪರಿಶೀಲಿಸಲಾಗುತ್ತದೆ. ಅದರಂತೆಯೇ ಕೇಂದ್ರ ಸರ್ಕಾರ ಪರಿಹಾರ ನೀಡಲಿದೆ ಎಂದು ದಿನೇಶ್ ಗೂಳಿಗೌಡ ಅವರು ಹೆಚ್.ಕೆ.ಪಾಟೀಲರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

# ಹಗರಣ, ಭ್ರಷ್ಟಾಚಾರವನ್ನೂ ಚರ್ಚಿಸಿ: ಛಲವಾದಿ ನಾರಾಯಣಸ್ವಾಮಿ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯ ಸರಕಾರವು ಈ ಅಧಿವೇಶನದಲ್ಲಿ ಹಗರಣಗಳು, ಭ್ರಷ್ಟಾಚಾರ, ಕಾನೂನು–ಸುವ್ಯವಸ್ಥೆಯಂಥ ವಿಚಾರಗಳನ್ನೂ ಚರ್ಚಿಸಬೇಕು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಇಂದು ಆಗ್ರಹಿಸಿದ್ದಾರೆ.

ಮಾಧ್ಯಮಗಳ ಜೊತೆ ಇಂದು ಮಾತನಾಡಿದ ಅವರು, ಅಧಿವೇಶನದಲ್ಲಿ ಕೇವಲ ಕಸ್ತೂರಿರಂಗನ್ ಅವರ ವರದಿಯ ವಿಚಾರ ಮತ್ತು ಬರ ಪರಿಸ್ಥಿತಿಯ ಎರಡೇ ವಿಚಾರಗಳನ್ನು ಚರ್ಚೆ ಮಾಡಬೇಕು ಅನ್ನುವುದು ಇದು ಸರ್ಕಾರದ ವಾದ.

ಇದು ವಿಶೇಷ ಅಧಿವೇಶನ ಎಂದಿದ್ದಾರೆ. ಕಾನೂನು ಪ್ರಕಾರ ಇದು ವಿಶೇಷ ಅಧಿವೇಶನ ಅಲ್ಲ ಎಂದು ತಿಳಿಸಿದರು.

24ನೇ ಆಗಸ್ಟ್ 2026 ರಂದು ಅನಿರ್ದಿಷ್ಟ ಕಾಲಾವಧಿಗೆ ಮುಂದೂಡಲಾಗಿದ್ದ ವಿಧಾನ ಪರಿಷತ್ತಿನ 159ನೇ ಅಧಿವೇಶನದ ಮುಂದುವರೆದ ಉಪವೇಶನವು ಅಂತ ಇದೆ. ಆದ್ದರಿಂದ ಇದು 24 ಕ್ಕೆ ಅನಿರ್ದಿಷ್ಟ ಕಾಲ ಮುಂದೂಡಿದ ಅಧಿವೇಶನದ ಮುಂದುವರೆದ ಭಾಗ ಎಂದಾಗುತ್ತದೆ. ಅಂದಮೇಲೆ ಇದು ವಿಶೇಷ ಅಧಿವೇಶನ ಆಗಲಿಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಿದರು.

ಅಗತ್ಯ ವಿಧಿವಿಧಾನ ಪೂರ್ಣವಾಗಿಲ್ಲ; ಈ ವಿಧಿವಿಧಾನ ಪೂರ್ಣಗೊಳ್ಳಲು ಮಾನ್ಯ ರಾಜ್ಯಪಾಲರು ಅಂಕಿತ ಹಾಕಬೇಕಿತ್ತು. ಆದರೆ, ಅದು ಆಗಿಲ್ಲ. ಅದರ ಮಧ್ಯದಲ್ಲಿ ಇವರು ವಿಶೇಷ ಅಧಿವೇಶನ ಕರೆಯಲಿಕ್ಕೆ ಬರುವುದೇ ಇಲ್ಲ. ಕೇವಲ ಎರಡೇ ವಿಷಯ ಚರ್ಚೆ ಮಾಡಬೇಕು ಅಂತಂದ್ರೆ ಅದನ್ನು ನಾವು ಒಪ್ಪಲಿಕ್ಕೆ ಸಾಧ್ಯವಿಲ್ಲ ಎಂದರು.



ಅನೇಕ ವಿಚಾರಗಳು ಮತ್ತು ಸಮಸ್ಯೆಗಳು ರಾಜ್ಯದಲ್ಲಿವೆ. ಭ್ರಷ್ಟಾಚಾರದ ವಿಚಾರಗಳಿವೆ. ಪೊಲೀಸ್, ಸುಲಿಗೆ, ಅತ್ಯಾಚಾರಗಳ ವಿಚಾರಗಳಿವೆ. ಇನ್ನು ಅನೇಕ ವಿಷಯಗಳ ಬಗ್ಗೆ ಚರ್ಚೆ ಆಗಬೇಕಾಗಿರುವುದರಿಂದ ನಾವು ಯಾವುದೇ ಚರ್ಚೆಯನ್ನು ಎತ್ತಿಕೊಳ್ಳಬಹುದು. ಸರ್ಕಾರ ಒಂದು ತಪ್ಪು ಮಾಹಿತಿಯನ್ನು ಕಿವಿಯಲ್ಲಿ ಇಟ್ಟುಕೊಂಡ ಹಾಗಿದೆ. ನಾವು ಹೇಳಿದ್ದೇ ಆಗಬೇಕು ಅನ್ನೋದು ಇದೆಯಲ್ಲ.. ಇದು ತಪ್ಪು ಕಲ್ಪನೆ. ಸದನ ಸರ್ಕಾರದ ಆಸ್ತಿ ಅಲ್ಲ. ಸದನ ಯಾವತ್ತೂ ಸದಸ್ಯರು ಮತ್ತು ಸದಸ್ಯರ ಪ್ರಾಪರ್ಟಿ ಆಗುತ್ತದೆ ಎಂದು ತಿಳಿಸಿದರು.

ಒಂದು ಸಾರಿ ಕರೆದ ಮೇಲೆ ಸದಸ್ಯರ ಆಲೋಚನೆಗಳನ್ನು ಮನದಲ್ಲಿ ಇಟ್ಟುಕೊಂಡು ಚರ್ಚೆಗಳಾಗಬೇಕಾಗುತ್ತದೆ. ಯಾಕೆಂದರೆ ಅದು ಜನಸಾಮಾನ್ಯರ ವಿಷಯಗಳನ್ನು ಚರ್ಚೆ ಮಾಡತಕ್ಕಂತ ವೇದಿಕೆ. ಆ ಕಾರಣದಿಂದ ನಾವು ಇದನ್ನು ಒಪ್ಪಲಿಕ್ಕೆ ಸಾಧ್ಯ ಇಲ್ಲ ಎಂದರು. ಇವತ್ತು ಯುವಕರು ಸಂಕಷ್ಟದಲ್ಲಿದ್ದಾರೆ ಕೆಪಿಎಸ್ಸಿ ಹಗರಣಗಳಿವೆ. ಹಲವು ವಿಷಯಗಳನ್ನು ನಾವು ಚರ್ಚೆ ಮಾಡಲೇಬೇಕಾಗಿದೆ; ಅವನ್ನು ನಾವು ಅಲ್ಲಿ ಎತ್ತಲಿದ್ದೇವೆ ಎಂದರು.

www.VIKRAMAVAHINI.com
|| ಕನ್ನಡ ದಿನಪತ್ರಿಕೆ ||
PRGI NO: KARKAN/2018/78481
ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ವಿಕ್ರಮ ವಾಹಿನಿ

# ಸರ್ಕಾರದ ವಿರೋಧ ಸ್ಪಷ್ಟ: ನಿಲುವು ತಿಳಿಸುವಂತೆ ಪ್ರತಿಪಕ್ಷಕ್ಕೆ ಪರಮೇಶ್ವರ್ ಆಗ್ರಹ

● ವಿಕ್ರಮ ವಾಹಿನಿ | ಬೆಂಗಳೂರು

ಪಶ್ಚಿಮಘಟ್ಟಗಳ ಕಸ್ತೂರಿರಂಗನ್ ಸಮಿತಿ ವರದಿ ಹಾಗೂ ರಾಜ್ಯದ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಆರಂಭವಾದ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವೆ ವಾಕ್ಸಮರ, ಘೋಷಣೆ ಮತ್ತು ಪ್ರತಿಭಟನೆಗೆ ವೇದಿಕೆಯಾಯಿತು.

ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರು ಕಸ್ತೂರಿರಂಗನ್ ವರದಿ ಕುರಿತು ಚರ್ಚೆ ಆರಂಭಿಸಿದರೂ ಪ್ರತಿಪಕ್ಷ ಸದಸ್ಯರ ಪ್ರತಿಭಟನೆ ಮುಂದುವರಿದ ಹಿನ್ನೆಲೆಯಲ್ಲಿ ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು.

ಕಸ್ತೂರಿರಂಗನ್ ವರದಿಯನ್ನು ಒಪ್ಪುವುದಿಲ್ಲ ಎಂಬ



ರಾಜ್ಯ ಸರ್ಕಾರದ ನಿಲುವನ್ನು ಈಗಾಗಲೇ ಹಲವು ಬಾರಿ ಕೇಂದ್ರಕ್ಕೆ ಪತ್ರಗಳ ಮೂಲಕ ತಿಳಿಸಲಾಗಿದೆ. ಕೇಂದ್ರ ಸರ್ಕಾರ ಪದೇಪದೇ ಅಧಿಸೂಚನೆ ಹೊರಡಿಸುತ್ತಿದ್ದು, ಇದೀಗ ಹೊರಡಿಸಿರುವ ಕರಡು ಅಧಿಸೂಚನೆಗೂ ರಾಜ್ಯದ ವಿರೋಧವಿದೆ ಎಂದು ಪರಮೇಶ್ವರ್ ಸ್ಪಷ್ಟಪಡಿಸಿದರು.

ಈ ಹಿನ್ನೆಲೆಯಲ್ಲಿ ವರದಿ ಕುರಿತು ಚರ್ಚಿಸಲು ವಿಶೇಷ ಅಧಿವೇಶನ ಕರೆಯಲಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರೈತರು, ಸ್ಥಳೀಯರು ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು, ಅವುಗಳನ್ನು ಸದನದಲ್ಲಿ ಸಮಗ್ರವಾಗಿ ಚರ್ಚಿಸಬೇಕಿದೆ ಎಂದು ಹೇಳಿದರು.

**ಪ್ರತಿಪಕ್ಷದ ನಿಲುವಿಗೆ ಪ್ರಶ್ನೆ:** ಕಸ್ತೂರಿರಂಗನ್ ವರದಿ ವಿಚಾರದಲ್ಲಿ ಪ್ರತಿಪಕ್ಷಗಳು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಪರಮೇಶ್ವರ್ ಆಗ್ರಹಿಸಿದರು. ವರದಿ ಪರವೋ ಅಥವಾ ವಿರೋಧವೋ ಎಂಬುದನ್ನು ತಿಳಿಸದಿದ್ದರೆ, ಜನರಿಗೆ ಪ್ರತಿಪಕ್ಷಗಳು ವರದಿ ಪರವಾಗಿವೆ ಎಂಬ ಸಂದೇಶ ಹೋಗಬಹುದು ಎಂದು ಹೇಳಿದರು.

ಇದಕ್ಕೆ ಪ್ರತಿಪಕ್ಷ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ವರದಿಗೆ ತಮ್ಮ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು. ಬಿಜೆಪಿ ನಾಯಕ ಸಿ.ಟಿ. ರವಿ ಅವರು ವರದಿ ಹಾಗೂ ಅದರ ಹಿನ್ನೆಲೆಯನ್ನು ಪ್ರಸ್ತಾಪಿಸಿ ಕಾಂಗ್ರೆಸ್ ಸರ್ಕಾರದ ನಿಲುವನ್ನು ಪ್ರಶ್ನಿಸಿದರು.

ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕೂಡ ಸರ್ಕಾರದ ನಿಲುವಿನ ಕುರಿತು ಆಕ್ಷೇಪ ವ್ಯಕ್ತಪಡಿಸಿದರು.

ಈ ವೇಳೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ಹಾಗೂ ಘೋಷಣೆಗಳು ಮುಂದುವರಿದ ಪರಿಣಾಮ ಸದನದ ಕಲಾಪಕ್ಕೆ ಕೆಲಕಾಲ ಅಡ್ಡಿಯಾಯಿತು.

# ವಂದೇಮಾತರಂ ಗಾಯನಕ್ಕೆ ವಿಧಾನಮಂಡಲದಲ್ಲಿ ಗದ್ದಲ

● ವಿಕ್ರಮ ವಾಹಿನಿ | ಬೆಂಗಳೂರು

ಬರ ಪರಿಸ್ಥಿತಿ ಹಾಗೂ ಕಸ್ತೂರಿರಂಗನ್ ವರದಿ ಕುರಿತು ಚರ್ಚಿಸಲು ಕರೆಯಲಾಗಿದ್ದ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ವಂದೇಮಾತರಂ ಗಾಯನದ ವಿಚಾರ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಗದ್ದಲಕ್ಕೆ ಕಾರಣವಾಯಿತು.

ವಿಧಾನಪರಿಷತ್‌ನಲ್ಲಿ ಸರ್ಕಾರದ ಆದೇಶದಂತೆ ವಂದೇಮಾತರಂನ ಮೊದಲ ಎರಡು ಚರಣಗಳನ್ನು ಹಾಡಿ ನಿಲ್ಲಿಸಿದ ಬಳಿಕ ಬಿಜೆಪಿ ಸದಸ್ಯರು ಪೂರ್ಣ ಗೀತೆಯನ್ನು ಹಾಡಿ ಆಕ್ಷೇಪ ವ್ಯಕ್ತಪಡಿಸಿದರು. ಇದೇ ವೇಳೆ ಸಭಾಪತಿ ಸಲೀಂ ಅಹ್ಮದ್ ಅವರು ಸಂವಿಧಾನದ ಪೀಠಿಕೆಯನ್ನು ಬೋಧಿಸಲು ಮುಂದಾದರು. ಇದರಿಂದ ಸದನದಲ್ಲಿ ಘೋಷಣೆ, ವಾಗ್ವಾದ ನಡೆಯಿತು.

ಬಿಜೆಪಿ ಸದಸ್ಯ ರವಿಕುಮಾರ್, ಹಿಂದೆ ಸದನದಲ್ಲಿ ಪೂರ್ಣ ವಂದೇಮಾತರಂ ಹಾಡಲಾಗುತ್ತಿತ್ತು. ಈಗ ಎರಡು ಚರಣಗಳಿಗೆ ಏಕೆ ಸೀಮಿತಗೊಳಿಸಲಾಗಿದೆ ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಸದಸ್ಯ ಯತೀಂದ್ರ, ರಾಜ್ಯ ಸರ್ಕಾರದ ಆದೇಶದಂತೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತದೆ. ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಅಥವಾ ರಾಜ್ಯಪಾಲರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಪೂರ್ಣ ಗೀತೆ ಹಾಡಲು ಅವಕಾಶವಿದೆ ಎಂದು ಸಮರ್ಥಿಸಿಕೊಂಡರು.

ಇದಕ್ಕೆ ಬಿಜೆಪಿ ಸದಸ್ಯರಾದ ಸಿ.ಟಿ. ರವಿ ಹಾಗೂ ಛಲವಾದಿ ನಾರಾಯಣಸ್ವಾಮಿ ಆಕ್ಷೇಪ ವ್ಯಕ್ತಪಡಿಸಿ, ಸಭಾಪತಿಯ ಅಧಿಕಾರದ ಕುರಿತು ಸ್ಪಷ್ಟನೆ ನೀಡುವಂತೆ ಆಗ್ರಹಿಸಿದರು. ಈ ವೇಳೆ ಯತೀಂದ್ರ ಮತ್ತು ಛಲವಾದಿ ನಾರಾಯಣಸ್ವಾಮಿ ನಡುವೆ ಮಾತಿನ ಚಕಮಕಿ ನಡೆಯಿತು. ಸಿ.ಟಿ. ರವಿ ಸಭಾಪತಿ ಪೀಠದ ಸ್ವಾಯತ್ತತೆಯ ಬಗ್ಗೆಯೂ ಪ್ರಶ್ನೆ ಎತ್ತಿದರು.

ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಮಾತನಾಡಿ, ಹಿಂದೆ ಸದನದಲ್ಲಿ ಎರಡು ಚರಣಗಳನ್ನೇ ಹಾಡಲಾಗುತ್ತಿತ್ತು ಎಂದರು. ಇದಕ್ಕೆ ಬಿಜೆಪಿ ಸದಸ್ಯರು, 'ಇದು ಕಾಂಗ್ರೆಸ್ ಕಚೇರಿಯಲ್ಲ, ವಿಧಾನಪರಿಷತ್' ಎಂದು ಆಕ್ಷೇಪಿಸಿದರು.

ಗದ್ದಲದ ನಡುವೆ ಉಪಮುಖ್ಯಮಂತ್ರಿ ಜಿ. ಪರಮೇಶ್ವರ್ ಅವರು ಕಸ್ತೂರಿರಂಗನ್ ವರದಿ ಹಾಗೂ ಬರ ಪರಿಸ್ಥಿತಿ ಕುರಿತು ಚರ್ಚೆಗೆ ಸಹಕರಿಸುವಂತೆ ಪ್ರತಿಪಕ್ಷಕ್ಕೆ ಮನವಿ ಮಾಡಿದರು. ಆದರೆ ಬಿಜೆಪಿ ಸದಸ್ಯರು ಕಸ್ತೂರಿರಂಗನ್ ವರದಿ ಜಾರಿಗೆ ವಿರೋಧ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲೂ ವಂದೇಮಾತರಂ ವಿಚಾರ ಪ್ರತಿಧ್ವನಿಸಿತು. ಎರಡು ಚರಣಗಳ ಬಳಿಕ ಗಾಯನ ನಿಲ್ಲಿಸಿದಾಗ ಬಿಜೆಪಿ–ಜೆಡಿಎಸ್ ಸದಸ್ಯರು ಉಳಿದ ಚರಣಗಳನ್ನು ಪೂರ್ಣವಾಗಿ ಹಾಡಿದರು. ಬಳಿಕ 'ಭಾರತ್ ಮಾತಾಕೀ ಜೈ', 'ವಂದೇಮಾತರಂ' ಹಾಗೂ 'ಜೈ ಭೀಮ್' ಘೋಷಣೆಗಳನ್ನು ಕೂಗಿದರು. ಸಭಾಧ್ಯಕ್ಷ ಜಿ.ಎಸ್. ಪಾಟೀಲ ಅವರು ನಿಗದಿತ ಕಲಾಪ ಮುಂದುವರಿಸಿದರು.

ರಾಜ್ಯ ಸರ್ಕಾರ ಸೆ.8ರಂದು ಹೊರಡಿಸಿರುವ ಆದೇಶದಂತೆ ಸಾಮಾನ್ಯ ಸರ್ಕಾರಿ ಕಾರ್ಯಕ್ರಮಗಳಲ್ಲಿ ವಂದೇಮಾತರಂನ ಎರಡು ಚರಣಗಳನ್ನು ಹಾಡಬೇಕು. ವಿಶೇಷ ಅಧಿವೇಶನವು ಸೆ.21ರಿಂದ 23ರವರೆಗೆ ನಡೆಯಲಿದ್ದು, ಕಸ್ತೂರಿರಂಗನ್ ವರದಿ, ಬರ ಹಾಗೂ ರೈತರ ಸಮಸ್ಯೆಗಳ ಕುರಿತು ಚರ್ಚೆ ನಿಗದಿಯಾಗಿದೆ.

# ದಟ್ಟ ಅರಣ್ಯಕ್ಕಷ್ಟೇ ಕಠಿಣ ನಿಯಮ; ತಜ್ಞರ ಸಮಿತಿ ರಚಿಸಿ: ಹರಿಪ್ರಸಾದ್

● ವಿಕ್ರಮ ವಾಹಿನಿ | ಬೆಂಗಳೂರು

ಪಶ್ಚಿಮಘಟ್ಟದ ಸಂಪೂರ್ಣ ಪ್ರದೇಶವನ್ನು ಒಂದೇ ನಿಯಮದಡಿ ತರುವ ಬದಲು ದಟ್ಟ ಅರಣ್ಯ ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಮಾತ್ರ ಕಠಿಣ ಸಂರಕ್ಷಣಾ ಕ್ರಮಗಳನ್ನು ರೂಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದರು.

ವಿಧಾನಮಂಡಲ ಅಧಿವೇಶನದಲ್ಲಿ ಕಸ್ತೂರಿರಂಗನ್ ವರದಿ ಕುರಿತು ಮಾತನಾಡಿದ ಅವರು, ಸ್ಯಾಟಲೈಟ್ ಮ್ಯಾಪಿಂಗ್ ಆಧರಿಸಿ ಪ್ರದೇಶಗಳನ್ನು ಗುರುತಿಸುವುದು ಸಮರ್ಪಕವಲ್ಲ. ಸ್ಥಳೀಯ ಪರಿಸ್ಥಿತಿ, ಭೌಗೋಳಿಕ ವಾಸ್ತವಾಂಶ, ಜನಜೀವನ ಹಾಗೂ ಜೀವನೋಪಾಯವನ್ನು ಪರಿಗಣಿಸಬೇಕು ಎಂದರು.

ಪಶ್ಚಿಮಘಟ್ಟದ ಸಂರಕ್ಷಣೆಯ ಜತೆಗೆ ಅಲ್ಲಿನ ಜನರ ಬದುಕು ಹಾಗೂ ಕೃಷಿ ಆಧಾರಿತ ಉದ್ಯೋಗಕ್ಕೂ ಆದ್ಯತೆ ನೀಡಬೇಕು. ಅರಣ್ಯ ಪ್ರದೇಶಗಳಲ್ಲಿ ಅಕ್ರಮ ಮರ ಸಾಗಣೆ, ಅನಿಯಂತ್ರಿತ ನಿರ್ಮಾಣ ಮತ್ತು ಪರಿಸರ ಹಾನಿ ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕೈಗಾದಲ್ಲಿ ಮತ್ತೊಂದು ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಅವಕಾಶ ನೀಡಬಾರದು. ಶರಾವತಿ ಯೋಜನೆಗಾಗಿ ಭೂಮಿ ಕಳೆದುಕೊಂಡವರಿಗೆ ಸಮರ್ಪಕ ಪುನರ್ವಸತಿ ಕಲ್ಪಿಸಬೇಕು. ಬಂಡೀಪುರದಲ್ಲಿ ರಾತ್ರಿ ಸಂಚಾರ ಸೇರಿದಂತೆ ಸ್ಥಳೀಯ ಪರಿಸರದ ಸೂಕ್ಷ್ಮತೆ ಆಧರಿಸಿ ನಿರ್ಧಾರ ಕೈಗೊಳ್ಳಬೇಕು ಎಂದರು. ರಾಜ್ಯ ಸರ್ಕಾರ ತಜ್ಞರ ಸಮಿತಿ ರಚಿಸಿ ವೈಜ್ಞಾನಿಕ ಹಾಗೂ ಸ್ಥಳೀಯ ವಾಸ್ತವಾಂಶಗಳ ಆಧಾರದ ಮೇಲೆ ಅಧ್ಯಯನ ನಡೆಸಿ, ವರದಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕು ಎಂದು ಹರಿಪ್ರಸಾದ್ ಒತ್ತಾಯಿಸಿದರು.

# ಕಸ್ತೂರಿರಂಗನ್ ವರದಿ: ನೆಲಮಟ್ಟದ ಸರ್ವೆ ಮಾಡಿ, ಉತ್ತಮ ವಕೀಲರನ್ನು ನೇಮಿಸಿ

● ವಿಕ್ರಮ ವಾಹಿನಿ | ಬೆಂಗಳೂರು

ಕಸ್ತೂರಿರಂಗನ್ ವರದಿ ಜಾರಿ ವಿಚಾರದಲ್ಲಿ ರಾಜಕೀಯ ಮಾಡದೆ ರಾಜ್ಯ ಸರ್ಕಾರ ನೆಲಮಟ್ಟದ ಸಮೀಕ್ಷೆ ನಡೆಸಿ, ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯ ಕುರಿತು ಸಮಗ್ರ ವರದಿ ಸಿದ್ಧಪಡಿಸಬೇಕು. ಜೊತೆಗೆ ಎನ್‌ಜಿಟಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾಗಿ ವಾದಿಸಲು ಪರಿಸರ ವಿಷಯದಲ್ಲಿ ಪರಿಣತಿ ಹೊಂದಿರುವ ಉತ್ತಮ ವಕೀಲರನ್ನು ನೇಮಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಸಲಹೆ ನೀಡಿದರು.

ವಿಧಾನಸಭೆಯಲ್ಲಿ ಕಸ್ತೂರಿರಂಗನ್ ವರದಿ ಕುರಿತು ಮಾತನಾಡಿದ ಅವರು, ಕಸ್ತೂರಿರಂಗನ್ ವರದಿ ಜಾರಿಗೆ ಕೇಂದ್ರ ಸರ್ಕಾರ ಸ್ವಯಂಪ್ರೇರಿತವಾಗಿ ಮುಂದಾಗಿಲ್ಲ. ಎನ್‌ಜಿಟಿ ಆದೇಶದ ಹಿನ್ನೆಲೆಯಲ್ಲಿ ಅಧಿಸೂಚನೆ ಹೊರಡಿಸಲಾಗುತ್ತಿದೆ. ಹೀಗಾಗಿ ಇದನ್ನು ಪ್ರಧಾನಿ ನರೇಂದ್ರ ಮೋದಿ ಅವರ ವೈಯಕ್ತಿಕ ನಿರ್ಧಾರವೆಂದು ಬಿಂಬಿಸದೆ, ರಾಜ್ಯದ ಹಿತದ ದೃಷ್ಟಿಯಿಂದ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ಕಸ್ತೂರಿರಂಗನ್ ವರದಿ ಜಾರಿಯಾದರೆ ಪಶ್ಚಿಮಘಟ್ಟ ಪ್ರದೇಶದ ರೈತರು ಹಾಗೂ ಸ್ಥಳೀಯ ನಿವಾಸಿಗಳಿಗೆ ಹಲವು ಸಮಸ್ಯೆಗಳು ಎದುರಾಗಬಹುದು. ಪರಿಸರ ಸಂರಕ್ಷಣೆಯ ಜತೆಗೆ ಜನರ ಬದುಕು ಮತ್ತು ರೈತರ ಹಿತವನ್ನೂ ಕಾಪಾಡಬೇಕಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕಸ್ತೂರಿರಂಗನ್ ವರದಿಯ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿ 1,576 ಗ್ರಾಮಗಳು ಹಾಗೂ 20,668 ಚದರ ಕಿ.ಮೀ. ಪ್ರದೇಶವಿದೆ. ಉಪಗ್ರಹ ಚಿತ್ರಗಳ ಆಧಾರದಲ್ಲಿ ನಡೆಸಿದ ಸಮೀಕ್ಷೆಯಲ್ಲಿ



**ಕೇರಳ ಮಾದರಿ ಅನುಸರಿಸಲು ಸಲಹೆ:**

ಕೇರಳ ಸರ್ಕಾರ ನೆಲಮಟ್ಟದ ಪರಿಶೀಲನೆ ನಡೆಸಿ ಪ್ರತಿ ಗ್ರಾಮದಲ್ಲಿರುವ ಮನೆ, ತೋಟ ಹಾಗೂ ಇತರ ವಾಸ್ತವಿಕ ಸ್ಥಿತಿಗತಿಗಳ ವಿವರ ಸಂಗ್ರಹಿಸಿ ಕೇಂದ್ರ ಸರ್ಕಾರ ಮತ್ತು ಎನ್‌ಜಿಟಿಗೆ ವರದಿ ಸಲ್ಲಿಸಿದೆ. ಇದರಿಂದ ಅಲ್ಲಿನ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು ಕಡಿಮೆ ಮಾಡಲು ಸಾಧ್ಯವಾಗಿದೆ. ಇದೇ ಮಾದರಿಯನ್ನು ಕರ್ನಾಟಕದಲ್ಲೂ ಅನುಸರಿಸಬೇಕು ಎಂದು ಅಶೋಕ ಸಲಹೆ ನೀಡಿದರು.

ರಾಜ್ಯ ಸರ್ಕಾರ ನೆಲಮಟ್ಟದ ಸಮೀಕ್ಷೆ, ಕೇಂದ್ರ ಸರ್ಕಾರಕ್ಕೆ ಸಮಗ್ರ ವರದಿ ಹಾಗೂ ಎನ್‌ಜಿಟಿ ಮತ್ತು ನ್ಯಾಯಾಲಯದಲ್ಲಿ ಸಮರ್ಥ ಕಾನೂನು ವಾದ ಈ ಮೂರು ಅಂಶಗಳತ್ತ ಗಮನಹರಿಸಬೇಕು.

ಗದ್ದೆ, ಕಾಫಿ ತೋಟ ಹಾಗೂ ಕಾಡಂಚಿನ ತೋಟಗಳೂ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೆ ಬಂದಿವೆ. ಇದರಿಂದ ಹಲವು ಜಿಲ್ಲೆಗಳ ರೈತರಿಗೆ ತೊಂದರೆಯಾಗುವ ಸಾಧ್ಯತೆಯಿದೆ ಎಂದು ಅಶೋಕ ಹೇಳಿದರು.

ವರದಿ ಜಾರಿಯಾದರೆ ರಸ್ತೆ, ವಿದ್ಯುತ್, ಮನೆಗಳ ದುರಸ್ತಿ ಸೇರಿದಂತೆ ಸ್ಥಳೀಯ ಮೂಲಸೌಕರ್ಯ ಕಾಮಗಾರಿಗಳಿಗೂ ಅಡಚಣೆಯಾಗಬಹುದು. ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದ ಈಗಾಗಲೇ ಕೆಲವು ಪ್ರದೇಶಗಳಲ್ಲಿ ಸಮಸ್ಯೆಗಳಿವೆ. ಸರ್ಕಾರ ಮೊದಲು ಈ ಇಲಾಖೆಗಳ ನಡುವೆ ಸಮನ್ವಯ ಸಾಧಿಸಬೇಕು ಎಂದು ಆಗ್ರಹಿಸಿದರು.

**ಒಂದು ವಾರ ಅಧಿವೇಶನ ನಡೆಸಿ:** ಕಸ್ತೂರಿರಂಗನ್ ವರದಿ ಕುರಿತು ಸಮಗ್ರ ಚರ್ಚೆ ನಡೆಸಲು ಸರ್ಕಾರ ಒಂದು ವಾರದ ಅಧಿವೇಶನ ನಡೆಸಬೇಕು ಎಂದು ಅಶೋಕ ಆಗ್ರಹಿಸಿದರು. ವಿಶೇಷ ಅಧಿವೇಶನಕ್ಕೆ ಸಂಬಂಧಿಸಿದ ಸರ್ಕಾರದ ಸುತ್ತೋಲೆಯಲ್ಲಿ ಉಲ್ಲೇಖಿಸಿರುವ ವಿಧಾನದಲ್ಲೂ ಸ್ಪಷ್ಟತೆ ಅಗತ್ಯವಿದೆ ಎಂದು ಅವರು ಹೇಳಿದರು.

ಕಸ್ತೂರಿರಂಗನ್ ವರದಿಯನ್ನು ಹಿಂದಿನ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ಸರ್ಕಾರಗಳೂ ವಿರೋಧಿಸಿದ್ದವು. ಹೀಗಾಗಿ ಈ ವಿಚಾರದಲ್ಲಿ ಪಕ್ಷಭೇದವಿಲ್ಲದೆ ರಾಜ್ಯದ ಹಿತಕ್ಕಾಗಿ ಒಗ್ಗಟ್ಟಿನ ನಿರ್ಧಾರ ಕೈಗೊಳ್ಳಬೇಕು ಎಂದು ಅಶೋಕ ಹೇಳಿದರು.

# ರೈಲ್ವೆ ಕ್ರೀಡಾಕೂಟ: ಪ್ರಧಾನ ಕಚೇರಿ ತಂಡಕ್ಕೆ ಚಾಂಪಿಯನ್ ಪಟ್ಟ

● ವಿಕ್ರಮ ವಾಹಿನಿ | ಹುಬ್ಬಳ್ಳಿ

ಸ್ಥಳೀಯ ರೈಲ್ವೆ ಕ್ರೀಡಾ ಮೈದಾನದಲ್ಲಿ ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ವತಿಯಿಂದ ಸೆಪ್ಟೆಂಬರ್ 18 ಮತ್ತು 19ರಂದು ಆಯೋಜಿಸಲಾಗಿದ್ದ ಕ್ರೀಡಾಕೂಟದಲ್ಲಿ ನೈರುತ್ಯ ರೈಲ್ವೆ ಕೇಂದ್ರ ಕಚೇರಿ, ಮೈಸೂರು, ಬೆಂಗಳೂರು ಹಾಗೂ ಹುಬ್ಬಳ್ಳಿ ವಿಭಾಗದ ಒಟ್ಟು 4 ತಂಡಗಳು ಪಾಲ್ಗೊಂಡಿದ್ದವು.

ಫೈನಲ್ ಪಂದ್ಯದಲ್ಲಿ ಪ್ರಧಾನ ಕಚೇರಿ ತಂಡದ ಡಿಐಜಿ/ಸಿಎಸ್‌ಸಿ ಶ್ರೀ ಎಸ್. ಲೂಯಿಸ್ ಅಮುತನ್ ಹಾಗೂ ಹೆಚ್‌ಸಿ/ಸಿಐಬಿ ಶ್ರೀ ಕುಮಾರ್ ಬಿ. ಜೋಡಿ ವಿಜೇತರಾಗಿ ಚಾಂಪಿಯನ್ ಪಟ್ಟ ಪಡೆದರು. ಹುಬ್ಬಳ್ಳಿ ವಿಭಾಗದ ಎಎಸ್‌ಸಿ ಶ್ರೀ ಜನಾರ್ದನ್ ಚೌಧರಿ ಮತ್ತು ಹೆಚ್‌ಸಿ ಮಂಜುನಾಥ್ ರಾಥೋಡ್ ಜೋಡಿ ರನ್ನರ್–ಅಪ್ ಸ್ಥಾನ ಗಳಿಸಿತು. ಸಮಾರಂಭದಲ್ಲಿ ಉಪಸ್ಥಿತರಿದ್ದ ಹಿರಿಯ ರೈಲ್ವೆ ಅಧಿಕಾರಿಗಳು ವಿಜೇತ ಹಾಗೂ ರನ್ನರ್–ಅಪ್ ಕ್ರೀಡಾಪಟುಗಳಿಗೆ ಪಾರಿತೋಷಕ ವಿತರಿಸಿ ಗೌರವಿಸಿದರು.



# ಹಿಂದುಜ ಕುಟುಂಬದವರಿಂದ ಪುತ್ತಿಗೆ ಶ್ರೀಗಳಿಗೆ ಆತಿಥ್ಯ

● ವಿಕ್ರಮ ವಾಹಿನಿ | ನವಿ ಮುಂಬೈ

ದೇಶದ ಪ್ರತಿಷ್ಠಿತ ಉದ್ಯಮಿಗಳಾದ ಶ್ರೀ ಅಶೋಕ್ ಹಿಂದುಜ ಅವರು ಉಡುಪಿ ಶ್ರೀ ಪುತ್ತಿಗೆ ಮಠದ ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರನ್ನು ಮುಂಬೈನ ತಮ್ಮ ಸ್ವಗೃಹಕ್ಕೆ ಆತ್ಮೀಯವಾಗಿ ಆಹ್ವಾನಿಸಿ, ಭಕ್ತಿಪೂರ್ವಕವಾಗಿ ಗುರುಸೇವೆ ಸಲ್ಲಿಸಿದರು.

ಪರಮಪೂಜ್ಯ ಶ್ರೀಪಾದಂಗಳವರು ತಮ್ಮ 53ನೇ ಚಾತುರ್ಮಾಸ್ಯ ವ್ರತವನ್ನು ನವಿ ಮುಂಬೈನ ಶ್ರೀಮಠದಲ್ಲಿ ಆಚರಿಸುತ್ತಿರುವ ಈ ಶುಭಸಂದರ್ಭದಲ್ಲಿ, ಶ್ರೀಪಾದಂಗಳವರ ಶಿಷ್ಯರೂ ಆಗಿರುವ ಖ್ಯಾತ ಉದ್ಯಮಿ ಶ್ರೀ ಅಶೋಕ್ ಹಿಂದುಜ



ಅವರು ವಿಶೇಷವಾಗಿ ಆಹ್ವಾನಿಸಿ ಆತಿಥ್ಯ ವಹಿಸಿದರು.

ಶ್ರೀಪಾದಂಗಳವರಿಂದ 'ಕೋಟಿ ಗೀತಾ ಲೇಖನ ಯಜ್ಞ'ದ ದೀಕ್ಷೆ ಪಡೆದಿರುವ ಶ್ರೀ ಅಶೋಕ್ ಹಿಂದುಜ ಅವರು, ತಮ್ಮ ಜೀವನದ ಯಶಸ್ಸಿಗೆ ಗುರುಗಳ ಸೇವೆ ಮತ್ತು ಆಶೀರ್ವಾದವೇ ಪ್ರಮುಖ ಕಾರಣವೆಂದು ಭಕ್ತಿಪೂರ್ವಕವಾಗಿ ಹಂಚಿಕೊಂಡರು.

ಈ ಸಂದರ್ಭದಲ್ಲಿ ಪರಮಪೂಜ್ಯ ಶ್ರೀಪಾದಂಗಳವರು ಹಿಂದುಜ ಕುಟುಂಬದ ದೇಶಸೇವೆ, ಸಮಾಜಮುಖಿ ಚಟುವಟಿಕೆಗಳು ಹಾಗೂ ಜನಪರ ಕಾರ್ಯಗಳನ್ನು ಶ್ಲಾಘಿಸಿದರು. ಕುಟುಂಬವು ಇನ್ನಷ್ಟು ಅಭಿವೃದ್ಧಿ ಹೊಂದಿ, ಸಮಾಜ ಮತ್ತು ದೇಶದ ಸೇವೆಯಲ್ಲಿ ಮತ್ತಷ್ಟು ಕೊಡುಗೆ ನೀಡುವಂತಾಗಲಿ ಎಂದು ಆಶೀರ್ವದಿಸಿದರು.

# ಇಂದು ಗಡುವು ಮುಕ್ತಾಯ; ನಾಳೆ ರಾತ್ರಿ 8ರಿಂದ 108 ಆ್ಯಂಬುಲೆನ್ಸ್ ಸೇವೆ ಬಂದ್!

● ವಿಕ್ರಮ ವಾಹಿನಿ | ಬೆಂಗಳೂರು

ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 108 ಆ್ಯಂಬುಲೆನ್ಸ್ ನೌಕರರು ಸರ್ಕಾರಕ್ಕೆ ನೀಡಿದ್ದ 15 ದಿನಗಳ ಗಡುವು ಇಂದು ಮುಕ್ತಾಯಗೊಂಡಿದೆ. ಬೇಡಿಕೆಗಳಿಗೆ ಸರ್ಕಾರದಿಂದ ಸ್ಪಂದನೆ ದೊರೆಯದ ಹಿನ್ನೆಲೆಯಲ್ಲಿ ನಾಳೆ (ಸೆ.22) ರಾತ್ರಿ 8 ಗಂಟೆಯಿಂದ ಸೇವೆ ಸ್ಥಗಿತಗೊಳಿಸಿ, ಸಾಮೂಹಿಕ ರಾಜೀನಾಮೆ ನೀಡಲು ನೌಕರರು ನಿರ್ಧರಿಸಿದ್ದಾರೆ.

ವಾರ್ಷಿಕ ವೇತನ ಪರಿಷ್ಕರಣೆ, ಎಲ್ಲ ಸಿಬ್ಬಂದಿಗೂ ಏಕರೂಪ ವೇತನ, ಜೇಷ್ಠತೆ ಆಧರಿಸಿ ವೇತನ ನಿಗದಿ, ಪ್ರತಿ ತಿಂಗಳ 7ರೊಳಗೆ ವೇತನ ಪಾವತಿ ಸೇರಿದಂತೆ ಹಲವು ಬೇಡಿಕೆಗಳನ್ನು ನೌಕರರು ಮುಂದಿಟ್ಟಿದ್ದಾರೆ. ಕರ್ತವ್ಯದ ವೇಳೆ ಅಪಘಾತದಿಂದ ಮೃತಪಟ್ಟ ಸಿಬ್ಬಂದಿಯ ಕುಟುಂಬಕ್ಕೆ 50 ಲಕ್ಷ ಪರಿಹಾರ, ಸೂಕ್ತ ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಹಾಗೂ ಶಿಫ್ಟ್ ಸಮಯದಲ್ಲಿ ಬದಲಾವಣೆ ಮಾಡುವಂತೆಯೂ ಒತ್ತಾಯಿಸಿದ್ದಾರೆ.

ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸೇವೆ ಸ್ಥಗಿತದ ಪರಿಸ್ಥಿತಿ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ನೌಕರರು ಆಗ್ರಹಿಸಿದ್ದಾರೆ. ಸೇವೆ ಸ್ಥಗಿತಗೊಂಡರೆ ರಾಜ್ಯಾದ್ಯಂತ ತುರ್ತು ಆರೋಗ್ಯ ಸೇವೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದ್ದು, ಸರ್ಕಾರದ ಮುಂದಿನ ಕ್ರಮದತ್ತ ಗಮನ ನೆಟ್ಟಿದೆ.

# ದಸರಾ ವೇಳೆ ಕಂಬಳ ಆಯೋಜನೆ ಬೇಡ: ಪ್ರಮೋದಾದೇವಿ ಒಡೆಯರ್

● ವಿಕ್ರಮ ವಾಹಿನಿ | ಮೈಸೂರು

ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಕಂಬಳ ಆಯೋಜಿಸುವುದು ಬೇಡ ಎಂದು ರಾಜಮಾತೆ ಪ್ರಮೋದಾದೇವಿ ಒಡೆಯರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಖಾಸಗಿ ದರ್ಬಾರ್ ಕುರಿತು ಮಾಹಿತಿ ನೀಡಿದ ಅವರು, ಮಂಗಳೂರು ಭಾಗದ ಕಂಬಳಕ್ಕೆ ತನ್ನದೇ ಆದ ವೈಶಿಷ್ಟ್ಯ ಹಾಗೂ ಮಹತ್ವವಿದೆ. ದಸರಾ ಮಹೋತ್ಸವದ ಸಂದರ್ಭದಲ್ಲಿ ಕಂಬಳ ಆಯೋಜಿಸಿದರೆ ಅದಕ್ಕೆ ಸೂಕ್ತ ಪ್ರಾಮುಖ್ಯತೆ ದೊರೆಯುವುದಿಲ್ಲ ಎಂದು ಹೇಳಿದ್ದಾರೆ.

ದಸರಾ ಮುಕ್ತಾಯಗೊಂಡ ಬಳಿಕ ಪ್ರತ್ಯೇಕವಾಗಿ ಕಂಬಳ ಆಯೋಜಿಸಿದ್ದರೆ ಉತ್ತಮವಾಗಿರುತ್ತಿತ್ತು. ದಸರಾ ಸಂದರ್ಭದಲ್ಲಿ ಕಂಬಳ ಆಯೋಜಿಸುವ ಕುರಿತು ಸರ್ಕಾರ ತಮ್ಮ ಅಭಿಪ್ರಾಯವನ್ನು ಕೇಳಿಲ್ಲ ಎಂದು ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ. ದಸರಾ ಸಂಭ್ರಮಕ್ಕೆ ಧಕ್ಕೆಯಾಗದಂತೆ ಕಂಬಳವನ್ನು ಪ್ರತ್ಯೇಕವಾಗಿ ಆಯೋಜಿಸುವುದು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

# 'ಪಶ್ಚಿಮಘಟ್ಟದ ಮೇಲೆ ಕಸ್ತೂರಿ ರಂಗನ್ ವರದಿ ತೂಗುಗತ್ತಿ'

● ವಿಕ್ರಮ ವಾಹಿನಿ | ಬೆಂಗಳೂರು

ಕಸ್ತೂರಿರಂಗನ್ ವರದಿಗೆ ಸಂಬಂಧಿಸಿದಂತೆ ರಾಜ್ಯಗಳ ಸಲಹೆ ಪರಿಶೀಲಿಸಲು ನೇಮಕವಾದ ಸಂಜಯ ಕುಮಾರ್ ಸಮಿತಿ, ಪಶ್ಚಿಮಘಟ್ಟದ ಬಾಧಿತ ಗ್ರಾಮಗಳಿಗೆ ಭೇಟಿ ನೀಡಿ ಜನರ ಅಭಿಪ್ರಾಯವನ್ನೇ ಪಡೆಯಲಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ವಿಧಾನಸಭೆಯಲ್ಲಿಂದು ಕಸ್ತೂರಿ ರಂಗನ್ ವರದಿ ಕುರಿತ ಚರ್ಚೆಯ ವೇಳೆ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ನಿವೃತ್ತ ಅರಣ್ಯಾಧಿಕಾರಿ ಸಂಜಯ್ ಕುಮಾರ್ ಅರಣ್ಯ ಸಚಿವನಾಗಿದ್ದಾಗ ನನ್ನ ಭೇಟಿ ಮಾಡಿದ್ದರು. ನಾನು ಗ್ರಾಮ ಪಂಚಾಯತಿಗಳಿಗೆ ಹೋಗಿ, ಜನವಸತಿ ಪ್ರದೇಶಕ್ಕೆ ಭೇಟಿ ನೀಡಿ ಅಭಿಪ್ರಾಯ ಪಡೆಯಲು ಸಲಹೆ ನೀಡಿದ್ದೆ. ಆದರೆ ಅವರು ತಮ್ಮ ಕರ್ತವ್ಯ ಮಾಡಲಿಲ್ಲ ಎಂದರು.

ಕಸ್ತೂರಿರಂಗನ್ ವರದಿಯಲ್ಲಿ ನಮೂದಿಸಿರುವ 20,668 ಚದರ ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶದ ಪೈಕಿ 16000 ಚದರ ಕಿ.ಮೀ ಈಗಾಗಲೇ ಹುಲಿ ಸಂರಕ್ಷಿತ ಪ್ರದೇಶ, ಅಭಯಾರಣ್ಯ, ಮೀಸಲು ಅರಣ್ಯ ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಶೇ.80ರಷ್ಟು ಸಂರಕ್ಷಿತವಾಗಿದೆ. ಇದರ ಹೊರತಾಗಿ 10 ಜಿಲ್ಲೆಗಳ 34 ತಾಲೂಕಿನ 1449 ಹಳ್ಳಿಗಳು ಸೂಕ್ಷ್ಮ ಪ್ರದೇಶದಲ್ಲಿವೆ ಅವರಿಗೆ ನ್ಯಾಯ ಸಿಗಬೇಕು ಎಂದರೆ ಅಷ್ಟು ಪ್ರದೇಶ ಬಿಟ್ಟು ಬಿಡಿ ಎಂದು ಕೇಳಬೇಕು ಎಂದರು.

ಕೇರಳ ರಾಜ್ಯದಲ್ಲಿ ಸುಮಾರು 13 ಸಾವಿರ ಚ.ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಇತ್ತು. ಇದನ್ನು 9900 ಚ.ಕಿ.ಮೀ. ಇಳಿಸಲಾಗಿದೆ ಎಂದು ನೆನಪಿಸಿದರು.

ಅದೇ ರೀತಿ ಸಭೆ ಮಾಡಿ ಸಮೀಕ್ಷೆ ಮಾಡಬೇಕು. ಹಲವು ನದಿಗಳ ಮೂಲವಾದ ಪಶ್ಚಿಮ ಘಟ್ಟ 8ನೇ ಜೀವವೈವಿಧ್ಯ ತಾಣವಾಗಿದೆ. ಮಳೆಯ ಮಾರುತ ತಡೆದು ದೇಶವ್ಯಾಪ್ತಿ ಮಳೆ ಸುರಿಸಲು ನೆರವಾಗುತ್ತದೆ. ಹೀಗಾಗಿ ಅದನ್ನು ಸಂರಕ್ಷಿಸಬೇಕು. ಇಷ್ಟು ದಿನ ಅದು ಉಳಿದಿದ್ದರೆ ಅಲ್ಲಿನ ನಿವಾಸಿಗಳಿಂದ ಎಂದರು.



**'ಅರಣ್ಯ ಅಧಿಕಾರಿಗಳ ದೂಷಣೆ ಸಲ್ಲ'**

ಅರಣ್ಯ ಇಲಾಖೆಯ ಅಧಿಕಾರಿಗಳನ್ನು ದೂಷಿಸುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ. ಅರಣ್ಯ ಸಂರಕ್ಷಣೆಗೆ ರಾಜ್ಯದ ಕಾಯಿದೆ ಮತ್ತು ಕೇಂದ್ರದ ಕಾಯಿದೆ ಇದೆ. ಅದನ್ನು ಪಾಲಿಸಬೇಕಾಗುತ್ತದೆ. ಇಲ್ಲವೇ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಕಾಯಿದೆಗೆ ತಿದ್ದುಪಡಿ ತರಬೇಕಾಗುತ್ತದೆ ಎಂದರು.

ಒಂದೊಮ್ಮೆ ನ್ಯಾಯಲಯದ ಆದೇಶದಂತೆ ಈ ಅಧಿಸೂಚನೆಯನ್ನೇ ಅಂತಿಮಗೊಳಿಸಿದರೆ ಕಷ್ಟವಾಗುತ್ತದೆ. ಹೀಗಾಗಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಹಾಗೂ ಒಮ್ಮತದಿಂದ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ಸದನ ನಿರ್ಣಯಿಸಬೇಕಾಗುತ್ತದೆ ಎಂದರು.

# ಕೆಪಿಎಸ್‌ಸಿ ನೇಮಕಾತಿ ಹಗರಣ; ರೂ 1.5 ಕೋಟಿ ಹಣ, ರೂ 22 ಲಕ್ಷದ ಚಿನ್ನಾಭರಣ ಜಪ್ತಿ

● ವಿಕ್ರಮ ವಾಹಿನಿ | ಬೆಂಗಳೂರು

ಕೆಪಿಎಸ್‌ಸಿ ಪಶುವೈದ್ಯಾಧಿಕಾರಿ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಮುಂದುವರಿದಿದ್ದು, ಸಿಐಡಿ ತನಿಖೆಯಲ್ಲಿ ಇದುವರೆಗೆ ರೂ 1.5 ಕೋಟಿಗೂ ಅಧಿಕ ಹಣ ಹಾಗೂ ರೂ 22 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿಯಾಗಿವೆ ಎಂದು ತಿಳಿದುಬಂದಿದೆ.

ಪ್ರಕರಣದ ಪ್ರಮುಖ ಆರೋಪಿ ಬಸವರಾಜ್ ಕನ್ನಾಳೆ ವಿವಿಧ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದಿರುವ ಆರೋಪ ಎದುರಿಸುತ್ತಿದ್ದಾರೆ. ಅವರ ಬ್ಯಾಂಕ್ ಖಾತೆಗಳು ಹಾಗೂ ಕುಟುಂಬ ಸದಸ್ಯರ ಖಾತೆಗಳಲ್ಲಿನ ಹಣದ ವಹಿವಾಟುಗಳನ್ನು ತನಿಖೆ ನಡೆಸಲಾಗುತ್ತಿದೆ.

ಓಂ ಲಕ್ಷ್ಮಿ ಸೌಹಾರ್ದ ಸಹಕಾರಿ ಬ್ಯಾಂಕ್‌ನಲ್ಲಿ ರೂ 64 ಲಕ್ಷ, ಕೋಟಕ್ ಮಹೀಂದ್ರಾ ಬ್ಯಾಂಕ್‌ನಲ್ಲಿ ರೂ 5.2 ಲಕ್ಷ ಹಾಗೂ ಕನ್ನಾಳೆ ಅವರ ಪತ್ನಿಯ ಖಾತೆಯಲ್ಲಿ ರೂ 71 ಲಕ್ಷ ಪತ್ತೆಯಾಗಿದೆ ಎಂದು ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಹಣದ ವಹಿವಾಟು ಮತ್ತು ಆಸ್ತಿ ವಿವರಗಳ ಪರಿಶೀಲನೆ ಮುಂದುವರಿದಿದೆ.

ತನಿಖೆಯಲ್ಲಿ ಅಭ್ಯರ್ಥಿಗಳಿಂದ ಸಂಗ್ರಹಿಸಿದ ಹಣದ ಒಂದು ಭಾಗವನ್ನು ಚಿನ್ನಾಭರಣ ಖರೀದಿಗೆ ಬಳಸಿರುವ ಶಂಕೆಯೂ ವ್ಯಕ್ತವಾಗಿದೆ.

ಈ ಸಂಬಂಧ ಬ್ಯಾಂಕ್ ವಹಿವಾಟು, ಆಭರಣ ಖರೀದಿ ದಾಖಲೆಗಳು ಹಾಗೂ ಇತರ ಹಣಕಾಸು ದಾಖಲೆಗಳನ್ನು ಸಿಐಡಿ ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

# *ಸೌಜನ್ಯ ಪ್ರಕರಣ ಮರು ತನಿಖೆ ನಡೆಸಿ ಮೂರು ತಿಂಗಳಲ್ಲಿ ವರದಿ ಸಲ್ಲಿಸಿ: ಸುಪ್ರೀಂ ಕೋರ್ಟ್*

● ವಿಕ್ರಮ ವಾಹಿನಿ | ಬೆಂಗಳೂರು

*ಕಳೆದ 2012ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಸಮೀಪ ನಡೆದಿದ್ದ ಕಾಲೇಜು ವಿದ್ಯಾರ್ಥಿನಿ ಸೌಜನ್ಯ ಕೊಲೆ ಪ್ರಕರಣದ ಮರು ತನಿಖೆಗೆ ಸುಪ್ರೀಂಕೋರ್ಟ್ ಅಸ್ತು ಎಂದಿದೆ.ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣದ ಹೊಸದಾಗಿ ತನಿಖೆಗೆ ಕೋರ್ಟ್ ಆದೇಶಿಸಿದ್ದು, 3 ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಸೂಚನೆ ನೀಡುವ ಮೂಲಕ ಸೌಜನ್ಯ ಪ್ರಕರಣಕ್ಕೆ ಮತ್ತೆ ಮರುಜೀವ ನೀಡಲಾಗಿದೆ.*

*ಸೌಜನ್ಯ ತಾಯಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜಯ್ ಕುಮಾರ್ ನೇತೃತ್ವದ ಪೀಠ, ಈ ಹಿಂದೆ ಪ್ರಕರಣದ ತನಿಖೆ ನಡೆಸಿದ್ದ ಅಧಿಕಾರಿಗಳನ್ನು, ಹೊಸ ತನಿಖೆಯಲ್ಲಿ ಸೇರಿಸದಂತೆ ನಿರ್ದೇಶನ ನೀಡಿದ್ದು, ಹೊಸ ತಂಡದಿಂದ ಸ್ವತಂತ್ರವಾಗಿ ಮರು ತನಿಖೆ ನಡೆಸುವಂತೆ ಸೂಚಿಸಿದೆ. ಪ್ರಕರಣದ ತನಿಖೆ ಮತ್ತು ಸಾಕ್ಷ್ಯಗಳ ಕುರಿತು ಈ ಹಿಂದೆ ಸುಪ್ರೀಂ ಕೋರ್ಟ್ ಗಂಭೀರ ಪ್ರಶ್ನೆಗಳನ್ನು ಎತ್ತಿತ್ತು. ಸಂತೋಷ್ ರಾವ್ ನಿರಪರಾಧಿ, ಪ್ರಕರಣವನ್ನು ಬೇರೆ ಯಾರೋ ನಡೆಸಿದ್ದಾರೆ ಎಂಬುದು ಅರ್ಜಿದಾರರ ಪರ ವಕೀಲರ ವಾದವಾಗಿತ್ತು. 140ರಿಂದ 150 ಪುಟಗಳ ಸಾಕ್ಷ್ಯವನ್ನು ತೆಗೆದುಹಾಕಲಾಗಿದೆ ಎಂಬ ಆರೋಪವೂ ವಿಚಾರಣೆಯಲ್ಲಿ ಪ್ರಸ್ತಾಪವಾಗಿತ್ತು.*

*2012 ರ ಅಕ್ಟೋಬರ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದ ಉಜಿರೆ ಎಸ್‌ಡಿಎಂ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯಾಗಿದ್ದ 17 ವರ್ಷದ ಸೌಜನ್ಯಾಳನ್ನು ಅಪಹರಿಸಿ, ಅತ್ಯಾಚಾರ ಎಸಗಿ ಅತ್ಯಂತ ಕ್ರೂರವಾಗಿ ಕೊಲೆ ಮಾಡಲಾಗಿತ್ತು.*

*ಘಟನೆ ನಡೆದ ಕೆಲವು ದಿನಗಳ ನಂತರ ಪೊಲೀಸರು ಸಂತೋಷ್‌ರಾವ್ ಎಂಬಾತನನ್ನು ಮುಖ್ಯ ಆರೋಪಿಯನ್ನಾಗಿ ಬಂಧಿಸಿದ್ದರು. ಸಾರ್ವಜನಿಕರ ತೀವ್ರ ಆಕ್ರೋಶ ಮತ್ತು ಪ್ರತಿಭಟನೆಗಳ ನಂತರ, ಪ್ರಕರಣವನ್ನು ಮೊದಲು ಸಿಐಡಿ ಮತ್ತು ನಂತರ ಕೇಂದ್ರ ತನಿಖಾ ದಳಕ್ಕೆ ವಹಿಸಲಾಗಿತ್ತು. ಸಿಬಿಐ ತನಿಖೆಯಲ್ಲಿ ಲೋಪದೋಷಗಳಿದ್ದು, ನೈಜ ಆರೋಪಿಗಳನ್ನು ರಕ್ಷಿಸಲಾಗಿದೆ ಎಂದು ಆರೋಪಿಸಿ ಸೌಜನ್ಯಾಳ ತಾಯಿ ಕುಸುಮಾವತಿ ಅವರು ಮರುತನಿಖೆಗೆ ಕೋರಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಹೈಕೋರ್ಟ್ ಈ ಅರ್ಜಿಯನ್ನು ತಿರಸ್ಕರಿಸಿತ್ತು. ತನಿಖಾ ಸಂಸ್ಥೆಯ ವೈಫಲ್ಯವನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್ ಇದೀಗ ಪ್ರಕರಣದ ಮರುತನಿಖೆ ನಡೆಸುವಂತೆ ಆದೇಶ ಹೊರಡಿಸಿದೆ.*



Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481 vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 169,